ಹಿತ್ತಲ ಗಿಡ

ಚಾತುರ್ಮಾಸಿಕ

ಪೈರು 7, ಕೊಯಿಲು 3, ಸೆಪ್ಟೆಂಬರ್ - ಡಿಸೆಂಬರ್, 2001

ರೈತ, ವಿಜ್ಞಾನಿ, ವಿದ್ಯಾರ್ಥಿ, ಸ್ವಯಂ ಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ದೆಹಲಿಯಲ್ಲಿ ಕನ್ನಡಿಗರಿಗೆ ಸನ್ಮಾನ



ಈ ಸಂಚಿಕೆಯಲ್ಲಿ

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟು ಹಾಕುವ ಪ್ರಯತ್ನ

ದೇಶೀಯ ಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಸಂಪಾದಕೀಯ

ಜಾಗತೀಕರಣದೊಡನೆ ಒಂದು ಸೂಕ್ತ ಅನುಸಂಧಾನ

ನಮ್ಮ ಹಿತ ಬಲಿಕೊಡದಂತೆ ಬದಲಿಗೆ ನಮ್ಮ ಆದ್ಯತೆಗಳನ್ನು ಗಟ್ಟಿ ಮಾಡುವತ್ತ ಈ ಜಾಗತೀಕರಣ ಕ್ರಿಯೆಯೊಡನೆ ಯಾವ ರೀತಿ ಅನುಸಂಧಾನ ನಡೆಸಬಹುದೆನ್ನುವುದರತ್ತ ಇಂದು ತೀವ್ರ ಗತಿಯಲ್ಲಿ ಚಿಂತನೆ ನಡೆಯುತ್ತಿದೆ. ಕೃಷಿ ಮತ್ತು ಗ್ರಾಮೀಣ ಬದುಕಿಗೆ ಸಂಬಂಧಿಸಿದಂತೆ ತಳಮಟ್ಟದ ಅನುಶೋಧನೆ, ಜೀವವೈವಿಧ್ಯ, ಸಾವಯುವ ಕೃಷಿ, ಸ್ಥಳೀಯ ಸಂಪನ್ಮೂಲಗಳು ಮತ್ತು ದೇಶೀಯ ಜ್ಞಾನ, ತಂತ್ರಜ್ಞಾನ, ಸಂಸ್ಥೆಗಳ ಮೇಲೆ ನಮ್ಮ ಗಮನ ಹೆಚ್ಚುತ್ತಾ ಹೋದಂತೆ ಈ ಅನುಸಂಧಾನ ಕ್ರಿಯೆ ಅರ್ಥಪೂರ್ಣವಾಗುವುದು ಮಾತ್ರವಲ್ಲ, ಮೂಲಕ ಈ ತೃತೀಯ ಜಗತ್ತಿಗೇ ಹೇಳಿ ಮಾಡಿಸಿದಂತಹ ಪ್ರಗತಿಯ ಪರಿಕಲ್ಪನೆ, ಅಭಿವೃದ್ಧಿ ಮಾದರಿಯೊಂದು ರೂಪ ತಾಳುವಂತಾಗುತ್ತದೆ. ಈ ನಿಟ್ಟಿನಲ್ಲಿ ಇಂದು ಭಾರತದಲ್ಲಿ ಹಲವು ಗಂಭೀರ ಪ್ರಯತ್ನಗಳು ನಡೆಯುತ್ತಿರುವುದು ಅತ್ಯಂತ ಭರವಸೆಯ ಸಂಕೇತ.

ಪ್ರೊ. ಅನಿಲ್ ಗುಪ್ತಾರವರ ನೇತೃತ್ವದ 'ರಾಷ್ಟ್ರೀಯ ಅನುಶೋಧನೆ' ಪ್ರತಿಷ್ಠಾನದ ಮೂಲಕ ಕೊಪ್ಪದ ನರಸಿಂಹ ಭಂಡಾರಿಯ ಅಡಿಕೆ ಸುಲಿಯುವ ಯಂತ್ರ ಬೆಳಕಿಗೆ ಬರುತ್ತಿದ್ದರೆ, ವನಜಾರಾಂ ಪ್ರಸಾದ್ ನೇತೃತ್ವದ ಗ್ರೀನ್ ಪ್ರತಿಷ್ಠಾನದ ಮೂಲಕ ತಳ್ಳಿಯಂತಹಾ ಕುಗ್ರಾಮದಲ್ಲಿ ನಾಟೀ ತಳಿಗಳ ಸಂರಕ್ಷಣೆಯ ಒಂದು ಚಳುವಳಿಯೇ ಮೇಲೇಳುತ್ತಿದೆ. ರಾಷ್ಟ್ರ ಮಟ್ಟದಲ್ಲಿ ಇದಕ್ಕೆ ಪೂರಕವಾಗಿ "ಜೀವ ವೈವಿಧ್ಯ ಸಂರಕ್ಷಣೆಯ ರಾಷ್ಟ್ರೀಯ ಕಾರ್ಯ ನೀತಿ ಮತ್ತು ಯೋಜನೆ" (National Biodiversity Strategy and Action Plan) ಯೊಂದು ಸದ್ದಿಲ್ಲದೇ ರೂಪಗೊಳ್ಳುತ್ತಿದೆ. ನಮ್ಮ ಸೋರ ಹುಣಸೆ ನಾರಾಯಣ ರೆಡ್ಡಿ, ದಿವಂಗತ ಕುರುವಳ್ಳಿ ಪುರುಷೋತ್ತಮರಾಯರಂತಹ ಪ್ರಗತಿಪರ ರೈತರು ಹುಟ್ಟುಹಾಕಿದ ಸಾವಯುವ ಕೃಷಿ ಚಳುವಳಿ ಇಂದು ಕೃಷಿ ವಿಶ್ವವಿದ್ಯಾನಿಲಯ ಸರ್ಕಾರ ಮತ್ತು ಕೃಷಿ ಇಲಾಖೆಗಳನ್ನು ಬಡಿದೆಬ್ಬಿಸುವಂತೆ ಮಾಡಿದೆ. ನೆದರ್‌ಲ್ಯಾಂಡ್‌ನ ಇಲೆಯ (ILEA) ಪತ್ರಿಕೆಯ ಮೂಲಕ ತಾತ್ವಿಕ ನೆಲಗಟ್ಟು ಪಡೆದಿರುವ, ಸ್ಥಳೀಯ ಸಂಪನ್ಮೂಲ ಅವಲಂಬಿತ "ಹೊರಗಿನ ಹೂಡಿಕೆಗಳ ಮೇಲೆ ಕನಿಷ್ಠ ಅವಲಂಬಿತ ಸುಸ್ಥಿರ ಕೃಷಿ" (Low External Input Sustainable Agriculture) ಇಂದು ನಮ್ಮ ಎ ಎಂ ಇ (Agriculture Man Ecology) ಯಂತಹಾ ಸಂಸ್ಥೆಗಳ ಮೂಲಕ ದಕ್ಷಿಣ ಭಾರತದಲ್ಲೇ

ಮುಂದುವರಿದಿದೆ...........

ಹಿತ್ತಲ ಗಿಡದ ಪೋಷಣೆಗೆ ಸಹಾಯ:

SRISTI (Society for Research and Initiatives for Sustainable Technologies and Institutions)
Indian Institute of Management, Vastavapur, Ahmedabad - 380 015
ಮತ್ತು
ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ನೃಪತುಂಗ ರಸ್ತೆ, ಬೆಂಗಳೂರು - 560 001

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನದ ಪ್ರಥಮ ವಾರ್ಷಿಕ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದ ಕನ್ನಡಿಗರು

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನದ ಪ್ರಥಮ ವಾರ್ಷಿಕ ಸ್ಪರ್ಧೆಯಲ್ಲಿ ಅನೇಕ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡು, ಕರ್ನಾಟಕಕ್ಕೆ ಕೀರ್ತಿ ತಂದ ಅನುಶೋಧಕರನ್ನು ಹಿತ್ತಲಗಿಡ ಈ ಸಂಚಿಕೆಯ ವಿಶೇಷವ್ಯಕ್ತಿಗಳಾಗಿ ಹೆಮ್ಮೆಯಿಂದ ಪರಿಚಯಿಸುತ್ತಿದೆ.

ಶ್ರೀ ನರಸಿಂಹ ಭಂಡಾರಿ: ಅಡಿಕೆ ಸುಲಿಯುವ ಯಂತ್ರಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಪ್ರಥಮ ಬಹುಮಾನ

ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿ ಅಡಿಕೆಯು ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಅಡಿಕೆ ಸಿಪ್ಪೆ ಸುಲಿಯುವ ಕಾರ್ಯಕ್ಕೆ ಸಾಕಷ್ಟು ಸಮಯ ಹಾಗೂ ಕೆಲಸಗಾರರು ಬೇಕಾಗಿರುವುದು, ಅಡಿಕೆ ಬೆಳೆಗಾರರ ಮುಖ್ಯ ಸಮಸ್ಯೆಯಾಗಿದೆ. ಕೊಪ್ಪ ತಾಲ್ಲೂಕ್, ಚಿಕ್ಕಮಗಳೂರು ಜಿಲ್ಲೆಯ ನರಸಿಂಹ ಭಂಡಾರಿಯವರ ಅಡಿಕೆ ಸುಲಿಯುವ ಯಂತ್ರವು ಈ ಸಮಸ್ಯೆಗೆ ಸೂಕ್ತ ಪರಿಹಾರವಾಗಲಿದೆ. ಹೆಚ್ಚಿನ ವಿವರಕ್ಕೆ ಹಿತ್ತಲಗಿಡ ಪೈ. 7 ಕೊ. 1, 2001 ನೋಡಿ.

ಸಂಪಾದಕೀಯ

ಗಟ್ಟಿಯಾಗುತ್ತಿದೆ. ಇದರ ಹಿನ್ನಲೆಯಲ್ಲೇ ಜಲಾಯನ ಅಭಿವೃದ್ಧಿ, ಕೆರೆ ಪುನರ್ ಚೈತನ್ಯದಂತಹಾ ಯೋಜನೆಗಳು ನಮ್ಮ ರಾಜ್ಯದಲ್ಲಿಂದು ಭರದಿಂದ ಸಾಗುತ್ತಲಿವೆ. ಇನ್ನು ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳನ್ನು ದಾಖಲಿಸಿ, ಪಸರಿಸಿ ಆ ಮೂಲಕ ಸುಸ್ಥಿರ ಅಭಿವೃದ್ಧಿಗೆ ಹೊಸತೊಂದು ಆಯಾಮ ನೀಡಲು ಹುಟ್ಟಿಕೊಂಡಿರುವ ಪ್ರೊ.ಗುಪ್ತಾರ 'ಹನೀಬೀ' ಪತ್ರಿಕೆಗೆ 13 ವರ್ಷ ತುಂಬುತ್ತಿದ್ದರೆ ನಮ್ಮ ಹಿತ್ತಲಗಿಡ ಈಗ 8ನೇ ವರ್ಷಕ್ಕೆ ಕಾಲಿಟ್ಟಿದೆ. ಈ ಮೇಲಿನ ಎಲ್ಲಾ ಪ್ರಯೋಗಗಳ ಹಿಂದೆ ಸಂರಕ್ಷಣೆಯ ಜೊತೆಗೆ ಸಮಾನತೆ ಮತ್ತು ಸುಸ್ಥಿರತೆಗಳನ್ನು ಅಂತರ್ಗತವಾಗಿಟ್ಟುಕೊಂಡಿರುವ ಪರಿಸರ ವಾದ ಗಟ್ಟಿಯಾಗಿ ಕೆಲಸ ಮಾಡುತ್ತಿರುತ್ತದೆ.

ಈ ಪರಿಸರವಾದ ತೃತೀಯ ಜಗತ್ತಿನ ರೈತರು , ನಾಟೀ ಸಮುದಾಯ , ಪಟ್ಟಣದ ಗ್ರಾಹಕರಿಂದ ಹಿಡಿದು ಪಶ್ಚಿಮದ ಪರಿಸರವಾದಿಗಳು ಪ್ರಜ್ಞಾವಂತ ನಾಗರೀಕ ವರ್ಗವನ್ನೇ ಆವರಿಸಿಕೊಳ್ಳುತ್ತಾ ಆ ಮೂಲಕ ಈ ಶತಮಾನದ ಅತ್ಯಂತ ಪ್ರಗತಿದಾಯಕ ಪ್ರಗತಿಯ ಪರಿಕಲ್ಪನೆಯಾದ ಸುಸ್ಥಿರ ಅಭಿವೃದ್ಧಿ ಮಾದರಿ ಗಟ್ಟಿಯಾಗಿ ಬೆಳೆಯಲು ಭೂಮಿಗೆ ಸಿದ್ಧವಾಗುವಂತಾಗಿದೆ. ಇದು ಜಾಗತೀಕರಣದೊಂದಿಗೆ ಸೂಕ್ತರೀತಿಯಲ್ಲಿ ಅನುಸಂಧಾನ ನಡೆಸಲು ಪಕ್ವ ವಾತಾವರಣ ಸಿದ್ಧವಾಗುತ್ತಿರುವ ಲಕ್ಷಣವಾಗಿದೆ.

ಪರಿಸರವಾದವನ್ನು ಚಳುವಳಿ, ಕಾನೂನು, ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಈ ದೇಶದಲ್ಲಿ ಗಟ್ಟಿಮಾಡುತ್ತಾ ತಮ್ಮ "ವಿಜ್ಞಾನ ಮತ್ತು ಪರಿಸರ ಕೇಂದ್ರ" (Centre for Science and Environment)ದ ಮೂಲಕ ಸರ್ಕಾರ ಮತ್ತು ಸಮಾಜದ ಕಣ್ತೆರೆಸುತ್ತಾ ಬಂದಿದ್ದ ಮಿತ್ರ ಅನಿಲ್ ಅಗರವಾಲ್‌ರ ಅಕಾಲ ಮರಣ ಈ ನಿಟ್ಟಿನಲ್ಲಿ ತುಂಬಲಾರದ ನಷ್ಟವಾಗಿದೆ. ಇದಕ್ಕೆ ಹಿತ್ತಲ ಗಿಡ ತೀವ್ರ ಸಂತಾಪ ವ್ಯಕ್ತಪಡಿಸುತ್ತಲಿದೆ.

ಡಾ. ಟಿ.ಎಸ್.ಪ್ರಕಾಶ್ ಕಮ್ಮರಡಿ

ಶ್ರೀ ಸುದರ್ಶನ: ವಿನೂತನ ಆಲೋಚನೆಗಳಿಗಾಗಿ ಪ್ರಥಮ ಬಹುಮಾನ

ಅಡಿಕೆ ಪತ್ರಿಕೆಯ ಸಂಪಾದಕರಾಗಿರುವ ಶ್ರೀ ಸುದರ್ಶನರವರು ದಿನನಿತ್ಯದ ಅವಶ್ಯಕತೆಗಳಿಗನುಗುಣವಾಗಿ ಸರಳ ಹಾಗೂ ಉಪಯುಕ್ತ ವಿನೂತನ ಆಲೋಚನೆಗಳನ್ನು ಹುಟ್ಟುಹಾಕುವಲ್ಲಿ ನಿಷ್ಣಾವಂತರಾಗಿದ್ದು, ಇಂತಹ ಸುಮಾರು 30ಕ್ಕೂ ಹೆಚ್ಚು ಆಲೋಚನೆಗಳನ್ನು ಹುಟ್ಟುಹಾಕಿರುತ್ತಾರೆ. ಉದಾಹರಣೆಗೆ ಇವರು ಆಲೋಚನೆಯಲ್ಲಿರುವ ಗಣಕ ಯಂತ್ರದ ಸಣ್ಣ ಕೀ ಬೋರ್ಡ್, ನಮ್ಮ ಕೈ ಬೆರಳಿನ ತುದಿಯಷ್ಟೇ ಗಾತ್ರದ ಕೀಗಳನ್ನು ಅಳವಡಿಸಿಕೊಳ್ಳುವಷ್ಟು ಚಿಕ್ಕದಾಗಿರುತ್ತದೆ.

ಶ್ರೀ ನಡಕಟ್ಟಿನ್: ರಾಜ್ಯ ಮಟ್ಟದ ಪ್ರಥಮ ಬಹುಮಾನ

ಅಣ್ಣಿಗೇರಿಯ ಅಣ್ಣಾ ಹಜಾರೇ ಎಂದೇ ಹೆಸರು ಪಡೆದಿರುವ ಶ್ರೀನಡಕಟ್ಟಿನ್‌ರವರು ಒಣ ಭೂಮಿಯಲ್ಲಿ ಮಳೆ ನೀರನ್ನು ಸಮಗ್ರವಾಗಿ ಬಳಸಿ ಹುಣಸೆಯ ನೂರಾರು ನಾಟೀ ತಳಿಗಳನ್ನು ಬೆಳೆಯುತ್ತಿದ್ದಾರೆ. ಹುಣಸೆ ಹಣ್ಣು ಕೊಯ್ಯುವ ಮತ್ತು ಹಣ್ಣಿನಿಂದ ಬೀಜ ಬೇರ್ಪಡಿಸುವ ಯಂತ್ರಗಳನ್ನು ಕಂಡು ಹಿಡಿದಿರುವ ನಡುಕಟ್ಟಿನ್ ರಾಜ್ಯ ಮಟ್ಟದಲ್ಲಿ ಪ್ರಥಮ ಬಹುಮಾನ ಪಡೆದಿರುವ ಏಕೈಕ ವ್ಯಕ್ತಿಯಾಗಿರುವರು. ಇವರ ಬಗ್ಗೆ ಹೆಚ್ಚಿನ ವಿವರಕ್ಕೆ ಹಿತ್ತಲಗಿಡ, ಪೈ.6, ಕೊ.3, 2000 ನೋಡಿ.

ಶ್ರೀ ಅಣ್ಣಾಸಾಹೇಬ ಉದ್ಗಾವಿಯವರ ಚಂದ್ರಪ್ರಭಾ ನೀರ್‌ಗನ್

ಚಿಕ್ಕೋಡಿ ತಾಲ್ಲೂಕಿನ, ಸದಲಗ ಹಳ್ಳಿಯ ಅಣ್ಣಾಸಾಹೇಬ ಉದ್ಗಾವಿಯವರು ಕಬ್ಬಿನ ಬೇಸಾಯದಲ್ಲಿ ದಟ್ಟ ಗಿಡಗಳ ಮಧ್ಯೆ ನೀರು ಹಾಯಿಸುವ ತೊಂದರೆಯಿಂದ ಬೇಸತ್ತು ಹಾಗೂ ಹೊಲಗಳಲ್ಲಿ ಹೇನು ಮತ್ತು ಬಿಳಿ ನೊಣಗಳ ಬಾಧೆಯಿಂದ ಕಂಗಾಲಾಗಿದ್ದರು. ತಮ್ಮ ಅಗಮ್ಯ ಕೃಷಿ ಅನುಭವದಿಂದ ಪ್ರವಾಹಿಕ ಹನಿ ನೀರಾವರಿ ಪದ್ಧತಿಗಳನ್ನು ಅಧ್ಯಯನ ಮಾಡಿ, ಈ ಎಲ್ಲಾ ತೊಂದರೆಗಳಿಗೆ ಪರಿಹಾರವಾಗಿ ನೀರು ಹಾಯಿಸುವ ಚಂದ್ರಪ್ರಭಾ ನೀರ್‌ಗನ್‌ನ್ನು ಕಂಡು ಹಿಡಿದಿದ್ದಾರೆ. ಇದಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ತೃತೀಯ ಬಹುಮಾನ ಬಂದಿದೆ. ಹೆಚ್ಚಿನ ವಿವರಗಳಿಗೆ ಹಿತ್ತಲಗಿಡ ಪೈ. 5, ಕೊ.1, 1999 ನೋಡಿ.

ಶ್ರೀ ಎ. ಆರ್. ಶಿವಕುಮಾರ್‌ರವರ ಕಡಿಮೆ ವೆಚ್ಚದ ಗೀಜರ್

ಬೆಂಗಳೂರಿನ ಯುವ ವಿಜ್ಞಾನಿ ಶಿವಕುಮಾರ್‌ರವರು ಹೆಚ್ಚು ಸಾಮರ್ಥ್ಯ ಆದರೆ ಕಡಿಮೆ ವಿದ್ಯುಚ್ಛಕ್ತಿ ಅವಶ್ಯಕವಿರುವ ನೀರು ಕಾಯಿಸುವ ಉಪಕರಣವನ್ನು ಕಂಡು ಹಿಡಿದಿದ್ದಾರೆ. ಇದರಿಂದ ಅವಶ್ಯಕವಿರುವಷ್ಟು ಬಿಸಿ ನೀರನ್ನು ನಿರಂತರವಾಗಿ ಪಡೆಯಬಹುದಾಗಿದೆ. ನೀರು ಕಾಯಿಸುವ ಪಾತ್ರೆಯ ಕೆಳಭಾಗದಿಂದ ತಣ್ಣೀರು ಪಾತ್ರೆಗೆ ತುಂಬಿಕೊಳ್ಳುತ್ತಿದ್ದರೆ, ಪಾತ್ರೆಯ ಮೇಲ್ಭಾಗದಲ್ಲಿ ಬಿಸಿ ನೀರು ಲಭ್ಯವಿರುತ್ತದೆ. ಶಿವಕುಮಾರರ ಈ ಅನುಶೋಧನೆಗೂ ತೃತೀಯ ಬಹುಮಾನ ಲಭಿಸಿರುತ್ತದೆ.

ಶ್ರೀ ಎ.ಡಿ. ನಾಗೇಂದ್ರಪ್ಪ: ರಾಷ್ಟ್ರೀಯ ಹೆದ್ದಾರಿ ಮತ್ತು ರೈಲುಹಳಿಗಳಿಂದ ವಿದ್ಯುತ್ ಉತ್ಪಾದನಾ ತಂತ್ರ

ವೃತ್ತಿಯಲ್ಲಿ ವಕೀಲರಾಗಿರುವ ಶ್ರೀ ನಾಗೇಂದ್ರಪ್ಪನವರು ಹೆದ್ದಾರಿಗಳಲ್ಲಿ ಮತ್ತು ರೈಲ್ವೆ ಹಳಿಗಳಲ್ಲಿ ಉಂಟಾಗುವ ವಾಹನ ಸಂಚಾರದಿಂದ ವಿದ್ಯುಚ್ಛಕ್ತಿ

ಉತ್ಪಾದಿಸಬಹುದೆಂಬ ವಿನೂತನ ಹಾಗೂ ಪ್ರಯೋಜನಕಾರಿ ಆಲೋಚನೆಗೆ ತೃತೀಯ ಬಹುಮಾನ ಪಡೆದಿದ್ದಾರೆ. ಲೋಹದ ಹಲಗೆ, ತಂತಿ ಮತ್ತು ತಿರುಗುವ ಚಕ್ರಗಳನ್ನು ಬಳಸಿ, ವಾಹನಗಳು ಲೋಹದ ಮೇಲೆ ಸಂಚಾರವಾದಾಗ ಏರ್ಪಾಟಾಗುವ ಕಾಂತೀಯ ತಿಕ್ಕಾಟದಿಂದ ವಿದ್ಯುಚ್ಛಕ್ತಿ ಉತ್ಪಾದಿಸಬಹುದೆಂಬುದು ಇವರು ಆಲೋಚನೆ ಮಾಡಿರುವ ಪ್ರಾಯೋಜಕ ತಂತ್ರಕ್ಕೆ ತೃತೀಯ ಬಹುಮಾನ ದೊರೆತಿರುವುದು.

ಸಮಾಧಾನಕರ ಬಹುಮಾನಗಳು

ಇಂಜೆಕ್ಷನ್ ನಳಿಕೆಗೆ ಬೀಗ ಹಾಕುವುದು - ಶ್ರೀ ಎನ್. ಕೃಷ್ಣಮೂರ್ತಿ

ಬೆಂಗಳೂರಿನ ಶ್ರೀ ಕೃಷ್ಣಮೂರ್ತಿಯವರು ವಿಶಿಷ್ಠ ರೀತಿಯಲ್ಲಿ ಬೀಗದ ವ್ಯವಸ್ಥೆಯನ್ನು ಕಂಡುಹಿಡಿದಿದ್ದಾರೆ. ಒಮ್ಮೆಯಷ್ಟೇ ಬಳಸಬಹುದಾದ ಇಂಜೆಕ್ಷನ್ ನಳಿಕೆಯನ್ನು ಹಣದಾಸೆಯಿಂದ ಮತ್ತೆ ಮತ್ತೆ ಬಳಸಲಾಗುತ್ತಿದ್ದು, ಇದರಿಂದ ಏಡ್ಸ್ ಸೇರಿ ಅನೇಕ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆಗಳಿವೆ. ಆದ್ದರಿಂದ ಇವರು ಕಂಡು ಹಿಡಿದಿರುವ ಈ ಬೀಗವು ಒಮ್ಮೆ ಇಂಜೆಕ್ಷನ್ ನಳಿಕೆ ಉಪಯೋಗಿಸಿದ ನಂತರ, ಮತ್ತೆ ಉಪಯೋಗಿಸಲಾರದಂತೆ ಬೀಗ ಹಾಕಿಕೊಳ್ಳುತ್ತದೆ.

ಶ್ರೀ ಕಪ್ಪಣ್ಣಗೌಡರ್ ಎತ್ತಿನ ಗಾಡಿ

ಮೈಸೂರು ಜಿಲ್ಲೆಯ ಕಪ್ಪಣ್ಣ ಗೌಡರವರು ಸುಧಾರಿತ ಮತ್ತು ಬಹು ಉಪಯೋಗಿ ಒಂಟಿ ಎತ್ತಿನ ಗಾಡಿಯನ್ನು ಕಂಡು ಹಿಡಿದಿದ್ದಾರೆ. ಹಿಂಭಾಗ ಮತ್ತು ಮುಂಭಾಗದ ಎರಡೂ ಕಡೆಗಳಿಂದ ಗಾಡಿಯನ್ನು ನಡೆಸಬಹುದಾಗಿರುವುದು ಈ ಗಾಡಿಯ ವಿಶೇಷತೆ. ಇದರಿಂದಾಗಿ ಈ ಗಾಡಿಯನ್ನು ಬೆಳೆಗಳಿಗೆ ಯಾವುದೇ ಹಾನಿಯಾಗದಂತೆ ಹೊಲದಲ್ಲಿ / ತೋಟದಲ್ಲಿ ನಡೆಸಬಹುದು. ಸಾಮಾನು ಸುರಿಯುವ ಕಾರ್ಯ ಸಹ ಈ ಗಾಡಿಯಲ್ಲಿ ಅತಿ ಸುಲಭವಾಗಿ ಮಾಡಬಹುದು.

ವಾರ್ಷಿಕ ಬದನೆ ಮರ - ಡಾ. ಪಿ.ಆರ್. ಕೃಷ್ಣಪ್ರಸಾದ್

ಮಂಡ್ಯದ ವಿ.ಸಿ. ಫಾರಂನಲ್ಲಿ ಕೃಷಿ ವಿಜ್ಞಾನಿಗಳಾಗಿರುವ ಡಾ. ಕೃಷ್ಣ ಪ್ರಸಾದ್‌ರವರು ವರ್ಷವಿಡೀ ಅಧಿಕ ಇಳುವರಿ ನೀಡುವ ಬದನೆ ತಳಿಗಳನ್ನು ತಮ್ಮ ಮನೆಯಂಗಳದಲ್ಲೇ ಬೆಳೆಸುತ್ತಾ, ಅದರ ಮೇಲೆ ಪ್ರಯೋಗ ನಡೆಸುತ್ತಾ ಬಂದಿರುವರು. ಈ ಬದನೆ ಮರ ಕೀಟ ಹಾಗೂ ರೋಗಗಳಿಗೆ ನಿರೋಧಕ ಶಕ್ತಿ ಹೊಂದಿರುವುದಲ್ಲದೆ ಎತ್ತರಕ್ಕೆ ಬೆಳೆದು, ವರ್ಷವಿಡೀ ಇಳುವರಿ ನೀಡುತ್ತದೆ.

ಮುಕ್ಕುಡುಕ ಕಷಾಯದಿಂದ ಸಸ್ಯ ಸಂರಕ್ಷಣೆ - ಶ್ರೀ ದಿನೇಶ

ಪಶ್ಚಿಮ ಘಟ್ಟ ಪ್ರದೇಶದಲ್ಲಿ ಅಡಿಕೆ ಬೆಳೆಗಾರರಾಗಿರುವ ಶ್ರೀದಿನೇಶ್‌ರವರು ಭತ್ತಕ್ಕೆ ಹಾನಿ ಉಂಟು ಮಾಡುವ ಕಂದು ಜಿಗಿ ಹುಳುವನ್ನು ನಿಯಂತ್ರಿಸಲು ಮುಕ್ಕುಡುಕದ ಕಷಾಯವನ್ನು ಕಂಡು ಹಿಡಿದಿದ್ದಾರೆ. ಇದಕ್ಕೆ ಕೃಷಿ ವಿಭಾಗದಲ್ಲಿ ಸಮಾಧಾನಕರ ಬಹುಮಾನ ಬಂದಿರುತ್ತದೆ.

ಭತ್ತದಲ್ಲಿ ಜಿಗಿ ಹುಳು ನಿಯಂತ್ರಣ - ಶ್ರೀ ಬಸವರಾಜ ಸಂತೇಶಿವರ

ಮೂಲತ: ಸಾವಯವ ಕೃಷಿಯನ್ನು ಅನುಸರಿಸುತ್ತಿರುವ ಬಸವರಾಜ ಸಂತೇಶಿವರ ಅವರು ಯಾವುದೇ ಕೀಟ ನಾಶಕಗಳ ಸಿಂಪಡಣೆ ಮಾಡದೆ ಭತ್ತದ ಕಂದು ಜಿಗಿ ಹುಳುವನ್ನು ನಿಯಂತ್ರಿಸುವ ಹೊಸ ಕೃಷಿ ಪದ್ಧತಿಯನ್ನು ಆವಿಷ್ಕರಿಸಿದ್ದು ಇದಕ್ಕೆ ಸಮಾಧಾನಕರ ಬಹುಮಾನ ಬಂದಿರುತ್ತದೆ. ವಿವರಕ್ಕೆ ಹಿತ್ತಲ ಗಿಡ ಪೈ. 4 ಕೊ.1, 1998 ನೋಡಿ.

ಕರ್ನಾಟಕ ಅನುಶೋಧಕರ ಜಾಲ (*KIN*)

(Karnataka Innovator's Network)

ಕಳೆದ ಡಿಸೆಂಬರ್ ಅಂತ್ಯದಲ್ಲಿ ದೆಹಲಿಯಲ್ಲಿ ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನದ ಪ್ರಥಮ ಸ್ಪರ್ಧೆಯಲ್ಲಿ ವಿಜೇತರನ್ನು ಸನ್ಮಾನಿಸುವ ಸಮಾರಂಭದಲ್ಲಿ ತೆಗೆದುಕೊಂಡ ಒಂದು ಮಹತ್ವದ ನಿರ್ಣಯದ ಅನ್ವಯ ಈ ಕರ್ನಾಟಕ ಅನುಶೋಧಕರ ಜಾಲವನ್ನು ಹುಟ್ಟುಹಾಕಲಾಗಿರುತ್ತದೆ. ಕರ್ನಾಟಕ ರಾಜ್ಯದ ಸಾವಯವ ರೈತರ ಪ್ರಯೋಗಗಳ, ಕೃಷಿಕರ ಬುಡಕಟ್ಟು ಜನಾಂಗಗಳ, ಕರಕುಶಲಕರ್ಮಿಗಳ , ಗ್ರಾಮೀಣ ಮಹಿಳೆಯರು ಮತ್ತು ಕಸುಬುದಾರರ, ಮತ್ತಿತರರ ತಳಮಟ್ಟದ ಹಾಗೂ ಪಟ್ಟಣ ಪ್ರದೇಶದಲ್ಲಿ ಯಾವ ಸಂಸ್ಥೆಗಳ ಸಹಾಯವಿಲ್ಲದೇ ನಡೆಸುತ್ತಿರುವ ಅನುಶೋಧನೆಗಳನ್ನು ಪ್ರೋತ್ಸಾಹಿಸಲು ವ್ಯವಸ್ಥಿತಗೊಳಿಸಿ ಆ ಮೂಲಕ ವಾಣಿಜ್ಯಗೊಳಿಸಲು ನೆರವಾಗುವುದೇ ಈ ಜಾಲದ ಮುಖ್ಯ ಉದ್ದೇಶವಾಗಿರುತ್ತದೆ. ರಾಷ್ಟ್ರೀಯ ಅನುಶೋಧನದ ಸಂಪೂರ್ಣ ಸಹಭಾಗಿತ್ವದಲ್ಲಿ ಕೆಲಸ ಮಾಡುವ ಈ ಜಾಲ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಈ ನಿಟ್ಟಿನಲ್ಲಿ ನೀತಿ, ನಿಯಮ ಮತ್ತು ಕಾರ್ಯಕ್ರಮಗಳನ್ನು ರೂಪಿಸಲು ಸಲಹೆ ಮತ್ತು ಸಹಕಾರ ನೀಡುವ ಕಾರ್ಯವನ್ನು ನಿರ್ವಹಿಸಲಿದೆ. ತಳಮಟ್ಟದ ಜನರ ಅನುಶೋಧನೆ ಮತ್ತು ಸಾವಯವ ಕೃಷಿಕರ ಪ್ರಯೋಗಗಳನ್ನು ಗಟ್ಟಿಮಾಡುವ ಘನ ಕಾರ್ಯದಲ್ಲಿ ನಿರತರಾಗಿರುವ ಎಲ್ಲಾ ವ್ಯಕ್ತಿ, ಸಂಘ, ಸಂಸ್ಥೆ ಸಮೂಹಗಳಿಗೆ ಕೊಂಡಿಯಾಗುತ್ತಾ ಕರ್ನಾಟಕ ಅನುಶೋಧಕರ ಜಾಲ - ಕಿನ್ (KIN), ಸುಸ್ಥಿರ ಅಭಿವೃದ್ಧಿಗೊಂದು ಹೊಸ ಆಯಾಮ ನೀಡಲು ಶಕ್ತಿ ಮೀರಿ ಪ್ರಯತ್ನ ನಡೆಸಲಿದೆ.

ವಿ.ಸೂ. : ಈ ಜಾಲದ ಸದಸ್ಯರಾಗ ಬಯಸುವವರು ರೂ.100 ನೀಡಿ ತಮ್ಮ ವಿಳಾಸ, ಅನುಶೋಧನೆಗಳ ಪೂರ್ಣ ವಿವರದೊಂದಿಗೆ ನೊಂದಾಯಿಸಿಕೊಳ್ಳಬಹುದು ಮತ್ತು ಈ ಮೇಲಿನ ತತ್ವವನ್ನು ಗಟ್ಟಿಮಾಡಬಯಸುವ ಎಲ್ಲರಿಗೂ ಸ್ವಾಗತವಿದೆ ಕಿನ್ ನಲ್ಲಿ ಸ್ವಾಗತವಿದೆ. ಹೆಚ್ಚಿನ ವಿವರಗಳಿಗೆ ಹಿತ್ತಲಗಿಡ ಸಂಪಾದಕರನ್ನು ಸಂಪರ್ಕಿಸಿ.

ಬೊಂಡೇ ಒಪನರ್

ದಕ್ಷಿಣ ಕನ್ನಡ ಜಿಲ್ಲೆಯ ಸಾಲಿಗ್ರಾಮದ ಪಿ.ವಿ. ಉಪಾಧ್ಯಾಯರು ಎಳೆ ತೆಂಗಿನಕಾಯಿಯನ್ನು ಸುಲಭದಲ್ಲಿ ತೂತು ಮಾಡುವ ಉಪಕರಣವನ್ನು ಕಂಡು ಹಿಡಿದಿದ್ದಾರೆ. ಪ್ಲಂಜರ್‌ನ್ನು ತೆಂಗಿನ ಕಾಯಿಯ ಮೇಲೆ ಇಟ್ಟು ಅದುಮಿದರೆ ಅದರ ಚೂಪಾದ ತುದಿ ತೂತು ಮಾಡುತ್ತದೆ.



ಇದು ಎಳ ನೀರು ಮಾರುವವರಿಗೆ ಬಹು ಉಪಯುಕ್ತ. ಕೇವಲ ಒಂದು ನಿಮಿಷದಲ್ಲಿ ಎಳನೀರು ಬೊಂಡೆಯನ್ನು ತೂತು ಮಾಡಬಹುದು.

ಅಡಿಕೆ ಗೋಪಾಲ ಕೃಷ್ಣ ಭಟ್‌ರವರ ತುಳಸಿ ಮಣಿ

ಕಾಸರಗೋಡು ಜಿಲ್ಲೆಯ ಕೊಟ್ಟೂರು ಗೋಪಾಲಕೃಷ್ಣ ಭಟ್ಟರು ಒಣಗಿದ ತುಳಸಿ ಕಾಂಡದಿಂದ ಮಣಿಗಳನ್ನು ತಯಾರಿಸಿ, ತುಳಸಿ ಮಣಿ ಮಾಲೆ ಮಾಡಿದ್ದಾರೆ. ಯಾವುದೇ ಯಂತ್ರದ ಸಹಾಯವಿಲ್ಲದೆ, ರಾಸಾಯನಿಕಗಳನ್ನು ಬಳಸದೇ ತುಳಸಿ ಮಣಿ ಮಾಡುತ್ತಾರೆ. ಕಾಂಡವನ್ನು ಹಸುವಿನ ಗಂಜಲದಲ್ಲಿ ನೆನೆಸಿ ನಂತರ ಒಣಗಿಸಿ ಮಣಿಯನ್ನು ಮಾಡುತ್ತಾರೆ. ತುಳಸಿಗೆ ಆಯುರ್ವೇದದಲ್ಲಿ ಮಾನ್ಯತೆ ಇರುವುದರಿಂದ, ಈ ಮಾಲೆ ಧರಿಸಿದವರು ಆರೋಗ್ಯವಂತರಾಗಿರುತ್ತಾರೆಂಬುದು ಅವರ ನಂಬಿಕೆ.

ಹತ್ತಿಯ ಗಂಡು ಹೂಗಳ ಶೇಖರಣೆ

ಮನೆಯಲ್ಲಿರುವ ಹಳೇ ಸುಣ್ಣದ ಮಡಕೆಯನ್ನು ಹಾವೇರಿ ಜಿಲ್ಲೆಯ ರಾಜಶೇಖರಯ್ಯರವರು ಹತ್ತಿಯ ಗಂಡು ಹೂಗಳನ್ನು ಶೇಖರಿಸುವ ರೆಫ್ರಿಜರೇಟರಾಗಿ ಬಳಸುತ್ತಿದ್ದಾರೆ. ಇವರು, ಗಂಡು ಹತ್ತಿ ಹೂಗಳನ್ನು ಹಳೇ ಸುಣ್ಣದ ಪಾತ್ರೆಯಲ್ಲಿ ಇಟ್ಟು, ಮುಚ್ಚಳ ಮುಚ್ಚಿ ಅದರ ಮೇಲೆ ಒದ್ದೆ ಬಟ್ಟೆಯನ್ನು ಹಾಕುತ್ತಾರೆ. ಪರಾಗ ಸ್ಪರ್ಶಕ್ರಿಯೆಗೆ ಬೇಕಾದಾಗಲೆಲ್ಲಾ ಈ ಹೂಗಳನ್ನು ಬಳಸುತ್ತಾರೆ.

ಸೂರ್ಯಕಾಂತಿಯಲ್ಲಿ ಉತ್ತಮ ಹುಟ್ಟುವಳಿ

ಸೂರ್ಯಕಾಂತಿ ಬೀಜದ ಹುಟ್ಟುವಳಿ ಹೆಚ್ಚಿಸಲು, ಬೀಜ ಬಿತ್ತುವ ಒಂದು ಗಂಟೆ ಮುಂಚೆ ಹುಳಿ ಮಜ್ಜಿಗೆಯಲ್ಲಿ ನೆನೆಸಿ ನಂತರ ಬಿತ್ತುವ ಪದ್ಧತಿಯನ್ನು ಧಾರವಾಡದ ಕದರ ಮಾದಲಗಿ ತಿಪ್ಪೇಸ್ವಾಮಿಯವರು ಅನುಸರಿಸುತ್ತಿದ್ದಾರೆ.

ಚೀಲ ತುಂಬಲು ಸ್ಟಾಂಡ್

ಸಾಮಾನ್ಯವಾಗಿ ಚೀಲಕ್ಕೆ ರಾಗಿ, ಭತ್ತ, ಗೋಧಿ ಮುಂತಾದವುಗಳನ್ನು ತುಂಬಲು ಇಬ್ಬರು ಬೇಕಾಗುತ್ತಾರೆ. ಒಬ್ಬರು ಚೀಲ ಎತ್ತಿ ಹಿಡಿಯಲು ಮತ್ತೊಬ್ಬರು ಚೀಲ ತುಂಬಲು, ಕೆಲವೊಮ್ಮೆ ಒಬ್ಬರೇ ಇರುವಾಗ ಇದು ಸಮಸ್ಯೆಯಾಗಿ ಬಿಡುತ್ತದೆ. ಕಾಸರಗೋಡು ಜಿಲ್ಲೆಯ ಪೆರ್ಲದ ಗೋಪಾಲಕೃಷ್ಣ ಶರ್ಮರು, ಇದಕ್ಕೊಂದು ಸುಲಭೋಪಾಯ ಕಂಡು ಹಿಡಿದಿದ್ದಾರೆ. ಕಬ್ಬಿಣದ ತಂತಿಯನ್ನು ವೃತ್ತಾಕಾರದಲ್ಲಿ ಸೇರಿಸಿ ಇದಕ್ಕೆ ಕೊಕ್ಕೆಗಳನ್ನು ಅಳವಡಿಸಿದ್ದಾರೆ. ಈ ಕೊಕ್ಕೆಗಳಿಗೆ ಚೀಲ ಸಿಕ್ಕಿಸಿ, ಒಬ್ಬ ವ್ಯಕ್ತಿ ಸಲೀಸಾಗಿ ಸಾಮಾನನ್ನು /ಧಾನ್ಯವನ್ನು ಚೀಲಕ್ಕೆ ತುಂಬಬಹುದು.

ಇಲಿಗಳನ್ನು ನಿಯಂತ್ರಿಸುವ ಸುಲಭೋಪಾಯ

ವೃತ್ತಿಯಲ್ಲಿ ಉಪಾಧ್ಯಾಯರಾಗಿರುವ ಕಾಸರಗೋಡು ಜಿಲ್ಲೆಯ ಪೆರ್ಲಾದ ಕೆ.ಉಮೇಶ್‌ರವರು ಪ್ರವೃತ್ತಿಯಲ್ಲಿ ದಿನ ನಿತ್ಯದ ಸಮಸ್ಯೆ ನಿವಾರಿಸುವ ಪರಿಹಾರಗಳ ಹರಿಕಾರರು. ಇವರು ಕೇಂದ್ರೀಯ ಗುರುತ್ವಾಕರ್ಷಣ ಬಲದ ಆಧಾರದ ಮೇಲೆ ಇಲಿಗಳನ್ನು ನಿಯಂತ್ರಿಸುವ ಸುಲಭ ಹಾಗೂ ಸರಳ ವಿಧಾನವೊಂದನ್ನು ಕಂಡು ಹಿಡಿದಿದ್ದಾರೆ.



ಒಂದು ಮರದ ಹಲಗೆಗೆ ಇಲಿ ತೂರುವಷ್ಟು ಸುತ್ತಳತೆ ಇರುವ ಒಂದು ಪೈಪನ್ನು ಜೋಡಿಸಿದ್ದಾರೆ. ಪೈಪಿನ ಕಾಲು ಭಾಗ ಮಾತ್ರ ಹಲಗೆ ಮೇಲೆ ಜೋಡಿಸಿ, ಪೈಪಿನ ಮತ್ತೊಂದು ತುದಿಯ ಕೆಳಗೆ ನೀರು ತುಂಬಿದ ಬಕೇಟನ್ನು ಇರಿಸಬೇಕು. ಇಲಿಗಳು ಈ ಪೈಪಿನೊಳಗೆ ಪ್ರವೇಶಿಸಿದಾಗ ಪೈಪಿನ ಮಧ್ಯಭಾಗದಿಂದ ಮುಂದೆ ಚಲಿಸಿದ ತಕ್ಷಣ ಪೈಪು ಬಾಗಿ ಇಲಿಗಳು ಬಕೇಟಿನಲ್ಲಿ ಇರುವ ನೀರಿಗೆ ಬೀಳುತ್ತವೆ. ಹೀಗೆ ಒಂದಾದ ನಂತರ ಮತ್ತೊಂದರಂತೆ, ಇಲಿಗಳು ನೀರಿಗೆ ಬೀಳುತ್ತಿರುತ್ತವೆ. ಇಲಿಗಳನ್ನು ಆಕರ್ಷಿಸಲು ಅವುಗಳು ಇಷ್ಟ ಪಡುವ ಆಹಾರವನ್ನು ಪೈಪಿನ ತುದಿಯಲ್ಲಿ ಇರಿಸಬಹುದು.

ಅತೀ ಕಡಿಮೆ ವೆಚ್ಚದ ಸ್ಪ್ರೇಯರ್

ಕಾಸರಗೋಡು ಜಿಲ್ಲೆಯ ನೆಕ್ರಾಜೆಯ ಗಣಪತಿ ಭಟ್‌ರವರು ಖಾಲಿ ಬಿಸಿಲರಿ ನೀರಿನ ಸೀಸೆಗೆ ಗ್ಲೂಕೋಸ್ ಹಾಕಲು ಬಳಸುವ ಪೈಪನ್ನು ಅಳವಡಿಸಿ, ಒತ್ತಡ ಸೃಷ್ಟಿಸಲು ತಲೆಕೂದಲಿಗೆ ನೀರು ಚಿಮುಕಿಸುವ ಸಣ್ಣ ಪ್ರಮಾಣದ ಸ್ಪ್ರೇಯರ್ ಹಿಡಿಯೊಂದನ್ನು ಅಳವಡಿಸಿ, ಗಿಡಗಳಿಗೆ ಕಷಾಯ / ದ್ರಾವಣ ಸಿಂಪಡಿಸುವ ಕಡಿಮೆ ವೆಚ್ಚದ ಸ್ಪ್ರೇಯರ್ ಮಾಡಿ ಉಪಯೋಗಿಸುತ್ತಿದ್ದಾರೆ.

ಸಂಗ್ರಹ: ಎಸ್.ಜಿ. ಶಶಿಕಲಾ, ಬದಿಯಡ್ಕ ಯಂತ್ರ ತಂತ್ರ ಪ್ರದರ್ಶನ

ಟ್ಮೊಮಾಟೋ ಬೆಳೆಯಲ್ಲಿ ಕೀಟ ನಿಯಂತ್ರಣ

ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿನ ಕರೆಯಾಗಳಹಳ್ಳಿಯ ಕೃಷಿಕ ಕಂಠಪ್ಪನವರು, ತಮ್ಮ ಟೊಮಾಟೋ ಬೆಳೆಗೆ ಬರುವ ಕೀಟಗಳನ್ನು ನಿಯಂತ್ರಿಸಲು, ಬೇವಿನ ಎಲೆಗಳನ್ನು ನೀರಿನಲ್ಲಿ ನೆನೆಸಿ, ನಂತರ ಅದರ ರಸ ತೆಗೆದು, ಅದಕ್ಕೆ ಸೋಪಿನ ಪುಡಿ ಬೆರೆಸಿ, ಗಿಡಗಳಿಗೆ ಸಿಂಪಡಿಸುತ್ತಾರೆ.

ಕಾಯಿಕೊರಕ ಹುಳುಗೆ ಬೆಳ್ಳುಳ್ಳಿ ಮದ್ದು

ಅರ್ಧ ಕೆ.ಜಿ. ಬೆಳ್ಳುಳ್ಳಿಯನ್ನು 100 ಮಿ.ಲೀ. ಸೀಮೆ ಎಣ್ಣೆಯಲ್ಲಿ ನೆನೆಸಿ, ಮಾರನೆ ದಿನ ಇದನ್ನು ಸೋಸಿ, ಅದಕ್ಕೆ 100 ಗ್ರಾಂ ಹಸಿರು ಮೆಣಸಿನ ಕಾಯಿಯನ್ನು ಅರೆದು ಹಾಕಿ, ನಂತರ ಇದಕ್ಕೆ 100 ಮಿ.ಲೀ. ನೀರನ್ನು ಸೇರಿಸಿ, ಕಾಯಿ ಕೊರಕ ಹುಳುಗಳ ಭಾಧೆಯಿರುವ ಎಲ್ಲಾ ಬೆಳೆಗೆ ಸಿಂಪಡಿಸಬಹುದು ಎಂಬುದು ದೇವನ ಹಳ್ಳಿ ತಾಲ್ಲೂಕು ದೊಡ್ಡಕೋಗಿಲು ಗ್ರಾಮದ ರಾಜಣ್ಣನವರ ಅನುಭವ.

ಕತ್ತೆ ಗಂಜಲಿನಿಂದ ರಸ ಹೀರುವ ಹುಳುಗಳ ಹತೋಟಿ

ಹಾಸನದ ನಮ್ಮ ಸಾವಯವ ಕೃಷಿಕ ಬಸವಾರಾಜುರವರು ತಮ್ಮ ಭತ್ತದ ಪೈರನ್ನು ಹಾಳು ಮಾಡುತ್ತಿದ್ದ ರಸ ಹೀರುವ ಹುಳುಗಳನ್ನು ನಿಯಂತ್ರಿಸಲು, ಕತ್ತೆ ಗಂಜಲನ್ನು ಶೇಖರಿಸಿ ತಂದು ಸಿಂಪಡಿಸುತ್ತಾರಂತೆ !

ಜೀರಿಗೆ ಬೆಳೆಯಲ್ಲಿ ಬೆಂಕಿರೋಗ ನಿವಾರಣೆ

ಗುಜರಾತಿನ ರೈತರಾದ ಪತುಬಾಯಿ ರಾತೋಡ್‌ರವರು ತಮ್ಮ ಜೀರಿಗೆ ಬೆಳೆಗೆ ತಗುಲಿದ ಬೆಂಕಿರೋಗ ನಿವಾರಿಸಲು, ತಮ್ಮದೇ ಆದ ರೋಗ ನಿವಾರಣಾ ಪದ್ಧತಿಯನ್ನು ಕಂಡುಹಿಡಿದಿದ್ದಾರೆ. ಎಳೆ ಬೇವಿನ ಎಲೆಗಳನ್ನು, ಕತ್ತಾಳೆ (*Agave sisalana*) ಮತ್ತು ಎಕ್ಕ (*Calotropis gigantea*) ದ ಎಲೆಗಳೊಂದಿಗೆ ಚೆನ್ನಾಗಿ ಅರೆದು, ದ್ರಾವಣವನ್ನಾಗಿಸಿಕೊಂಡು, 500 ಮಿ.ಲೀ. ದ್ರಾವಣಕ್ಕೆ 5 ಗ್ರಾಂ ಸೋಪಿನ ಪುಡಿ ಹಾಕಿ, 15 ಲೀ. ನೀರಿನಲ್ಲಿ ಬೆರೆಸಿ, ಜೀರಿಗೆ ಬೆಳೆಗೆ ಸಿಂಪಡಿಸುತ್ತಾರೆ. ಇವರು ಈ ಪದ್ಧತಿಯನ್ನು ಕಳೆದ 5 ವರ್ಷಗಳಿಂದ ಅನುಸರಿಸಿ ಉತ್ತಮ ಫಲ ಪಡೆದಿದ್ದಾರಂತೆ.

ಮೂಲ: ಹನೀಬೀ
ಏಪ್ರಿಲ್ - ಜೂನ್ (12/2), 2000

ಭತ್ತದ ಎಲೆ ಸುರುಳಿ ಹುಳುವಿಗೆ ಕತ್ತಾಳೆ ಔಷಧಿ

ಒಂದು ಕಿಲೋ ಕತ್ತಾಳೆ ಯನ್ನು ಒಂದು ಹಿತ್ತಾಳೆ ಪಾತ್ರೆಯಲ್ಲಿ, 10 ಲೀಟರ್ ನೀರಿನಲ್ಲಿ ಹಾಕಿ ಚೆನ್ನಾಗಿ ಬೇಯಿಸಿ, ನಂತರ ಸೋಸಿ, ಈ ದ್ರಾವಣಕ್ಕೆ 100 ಗ್ರಾಂ ಬೇವಿನ ಪುಡಿ ಹಾಕಿ ಕಲಸಿ ಭತ್ತಕ್ಕೆ ಸಿಂಪಡಿಸಿದರೆ ಎಲೆ ಸುರುಳಿ ಹುಳುವನ್ನು ಹತೋಟಿಯಲ್ಲಿಡಬಹುದು ಎಂಬುದು ದೇವನಹಳ್ಳಿ ತಾಲ್ಲೂಕ್, ದೊಡ್ಡಕೋಗಿಲು ಗ್ರಾಮದ ರೈತ ಮಲ್ಲೇಶಪ್ಪನವರ ಅನುಭವ.

ಬೂದಿಯ ಮಹತ್ವ - ತಿಮ್ಮಕ್ಕನ ಅನುಭವ

ಹೂಗಿಡಗಳಿಗೆ ಬಿಳಿ ಚುಕ್ಕೆ ರೋಗ ಬಂದರೆ, ಬೂದಿಯನ್ನು ನೀರಿನೊಂದಿಗೆ ಬೆರೆಸಿ ಅಥವಾ ಒಣಗಿದ ಬೂದಿಯನ್ನು ಗಿಡಗಳ ಮೇಲೆ ಹಾಕಿದರೆ, ಈ ರೋಗ ಹತೋಟಿಗೆ ಬರುತ್ತದೆ ಎಂಬುದು ತುಮಕೂರು ಜಿಲ್ಲೆ, ಶಿರಾ ತಾಲ್ಲೂಕ್ ಪಟ್ಟನಾಯಕನಹಳ್ಳಿ ತಿಮ್ಮಕ್ಕನ ಅನುಭವವಾಗಿದೆ.

ತೊಗರಿ ಮತ್ತು ಅವರೇ ಬೆಳೆಯಲ್ಲಿ ಕೀಟ ಹತೋಟಿ

ತುಮಕೂರು ಜಿಲ್ಲೆಯ ವೀರಪ್ಪನ ದೊಡ್ಡಿ ತಾಲ್ಲೂಕು ಮಹಾರುದ್ರಪ್ಪನವರು ತಮ್ಮ ತೊಗರಿ ಮತ್ತು ಅವರೇ ಬೆಳೆಗಳಲ್ಲಿ ಕೀಟಗಳನ್ನು ನಿಯಂತ್ರಿಸಲು ಬಿಲ್ವಪತ್ರೆ ಮತ್ತು ಬೇವಿನ ಸೊಪ್ಪನ್ನು ಬಳಸುತ್ತಾರೆ. ಬಿಲ್ವ ಪತ್ರೆ ಎಲೆಗಳನ್ನು 3-4 ದಿನ ನೀರಿನಲ್ಲಿ ನೆನೆಸಿ, ಅದರ ರಸ ತೆಗೆದು, ಆ ರಸಕ್ಕೆ ಬೇವಿನ ಎಲೆಯ ರಸ ಸೇರಿಸಿ ಗಿಡಗಳಿಗೆ ಸಿಂಪಡಿಸುತ್ತಾರೆ.

ಶಿವನಂಜಯ್ಯನವರ ಶಿಫಾರಸ್ಸು

ಸಸಿಮಡಿಯಲ್ಲಿ ಕೀಟರೋಗ ನಿಯಂತ್ರಣಕ್ಕೆ ಚಿಕ್ಕ ನಾಯಕನ ಹಳ್ಳಿ ತಾಲ್ಲೂಕಿನ, ಜೆ.ಸಿ. ಪುರದ ಜೆ.ಶಿವನಂಜಯ್ಯ ಬಾಳೆಕಾಯಿ ಅವರು 10 ಕೆ.ಜಿ. ಹಸಿ ಸಗಣಿ, ಒಂದು ಕೆ.ಜಿ. ಬೇವಿನ ಹಿಂಡಿ, ಒಂದು ಕೆ.ಜಿ. ಕಡಲೇಹಿಂಡಿ, 1 ಕೆ.ಜಿ. ಬೆಲ್ಲ, 100 ಗ್ರಾಂ ಅರಿಶಿನ ಪುಡಿ, ಇವುಗಳನ್ನು 50 ಲೀಟರ್ ನೀರಿನಲ್ಲಿ 48 ಗಂಟೆಗಳ ಕಾಲ ನೆನೆಸಿ ನಂತರ 1:10 ರ ಪ್ರಮಾಣದಲ್ಲಿ ದ್ರಾವಣವನ್ನು ಎಲ್ಲಾ ರೀತಿಯ ಸಸಿ ಮಡಿಗಳಿಗೆ 3-4 ಬಾರಿ ಸಿಂಪಡಿಸುತ್ತಾರಂತೆ. ಇದರಿಂದ ಯಾವುದೇ ಕೀಟ, ರೋಗಗಳ ಬಾಧೆಯಿಲ್ಲದ ಉತ್ತಮ ದರ್ಜೆಯ ಸಸಿಗಳನ್ನು ಪಡೆಯಬಹುದೆಂದು ತಮ್ಮ ಅನುಭವದಿಂದ ತಿಳಿಸಿದ್ದಾರೆ. ಈ ದ್ರಾವಣವನ್ನು ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಿ ಹಣ್ಣಿನ ಗಿಡಗಳಿಗೆ ಮತ್ತು ಅಡಿಕೆ ಗಿಡಗಳಿಗೆ ಬಳಸುವುದರಿಂದ ಉತ್ತಮ ಇಳುವರಿಯನ್ನು ಪಡೆಯಬಹುದೆಂಬುದು ಅವರ ಅಭಿಪ್ರಾಯ.

ಹಾಗೆಯೇ ತೆಂಗು ಮತ್ತು ಅಡಿಕೆ ಮರಗಳಲ್ಲಿ ರಸ ಸೋರುವ ಸಮಸ್ಯೆಯನ್ನು ಹೋಗಲಾಡಿಸಲು ಶಿವನಂಜಯ್ಯನವರು ಮರದ ಬುಡದ ಮಣ್ಣನ್ನು ಬಿಡಿಸಿ, ಬೇರಿನ ಉಸಿರಾಟವನ್ನು ಸರಾಗಗೊಳಿಸುವ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ.

ಬೆಳೆಗಳಲ್ಲಿ ಕೀಟ ನಿಯಂತ್ರಣ

ಬೇವು, ಗ್ಲಿರಿಸೀಡಿಯ, ಎಕ್ಕ (*Calotropis gigantea*), ದತ್ತೂರಿ (*Datura metel*), ಲಕ್ಕೆ (*Vitex negundo*), ವಿಶಮದಾರಿ (*Clerodendron inerme*) ಮತ್ತು ಬಿಲ್ವ ಪತ್ರೆ (*Aegle marmelos*) ಗಿಡಗಳ ಎಲೆಯನ್ನು ತಲಾ ಒಂದು ಕೆ.ಜಿ.ಯಂತೆ 10 ಲೀಟರ್ ಕುದಿಸಿದ ನೀರಿನಲ್ಲಿ 48 ಗಂಟೆ ಕಾಲ ಮುಳುಗಿಸಿ, ನಂತರ ಸೊಪ್ಪು ಹಿಂಡಿ, ಸೋಸಿ 1:10ರ ದ್ರಾವಣವನ್ನು ತಯಾರಿಸಿ ಬೆಳೆಗಳಿಗೆ ಸಿಂಪಡಿಸುವುದರಿಂದ ಬಹುತೇಕ ಕೀಟಗಳನ್ನು ಹತೋಟಿ ಮಾಡಬಹುದು ಎಂಬುದು ಶಿವನಂಜಯ್ಯನವರ ಮತ್ತೊಂದು ಯಶಸ್ವಿ ಪ್ರಯೋಗವಾಗಿದೆ.

ಹೂವಿನ ಬೆಳೆಯಲ್ಲಿ ರೋಗ - ಕೀಟ ನಿಯಂತ್ರಣಕ್ಕೆ

ಶಿವನಂಜಯ್ಯನವರು ತೆಂಗಿನ ಎಳನೀರನ್ನು ಸಂಗ್ರಹಿಸಿ ಅದನ್ನು 1:10ರ ಪ್ರಮಾಣದಲ್ಲಿ ಹೂವಿನ ಗಿಡಗಳಿಗೆ ವಾರಕ್ಕೊಮ್ಮೆಯಂತೆ, ಒಂದು ತಿಂಗಳು ಕಾಲ ಸಿಂಪಡಿಸಿ ತಮ್ಮ ಹೂತೋಟದಲ್ಲಿ ಬರುವ ಕೀಟ ಮತ್ತು ರೋಗಗಳನ್ನು ನಿಯಂತ್ರಿಸುತ್ತಿದ್ದಾರೆ ಹಾಗೂ ಉತ್ತಮ ದರ್ಜೆಯ ಹೂಗಳನ್ನು ಮತ್ತು ಅಧಿಕ ಇಳುವರಿಯನ್ನು ಪಡೆಯುತ್ತಿದ್ದಾರೆ.

ಹಸುಗಳಿಗೆ ಗಾಯವಾದರೆ

ಹಸುಗಳಿಗೆ ಗಾಯವಾದರೆ, ಗಾಯಕ್ಕೆ ಅರಿಶಿನ ಮತ್ತು ಸ್ವಲ್ಪ ಬೇವಿನ ಎಣ್ಣೆ ಹಚ್ಚಿ ನಂತರ ಕೆಂಪು ಮಣ್ಣನ್ನು ಮೆತ್ತಿ, ಒದ್ದೆ ಬಟ್ಟೆಯಿಂದ ಕಟ್ಟುವುದರಿಂದ ಅವುಗಳ ಗಾಯ ವಾಸಿ ಮಾಡಬಹುದು ಎಂಬುದು ಚಿಕ್ಕಮಗಳೂರು ಜಿಲ್ಲೆ ಮಲ್ಲೇನ ಹಳ್ಳಿಯ ಮೂರ್ತಿಯವರ ಅನುಭವ.

ಜಾನುವಾರುಗಳಿಗೆ ಬೇಧಿಯಾದರೆ

500 ಗ್ರಾಂ ಆಡುಸೋಗೆ *(Adhatoda vasica)* ಸೊಪ್ಪು ಮತ್ತು 500 ಗ್ರಾಂ ಬಳವಡಿಕೆ ಸೊಪ್ಪನ್ನು ಬೆಲ್ಲದೊಂದಿಗೆ ಬೆರೆಸಿ, ದಿನಕ್ಕೆ ಎರಡು ಬಾರಿ, 4 ದಿನ ಜಾನುವಾರುಗಳಿಗೆ ತಿನ್ನಿಸಿದರೆ ಬೇಧಿ ನಿಲ್ಲುತ್ತದೆ ಎಂಬುದು ಚಿಕ್ಕಮಗಳೂರು ಜಿಲ್ಲೆಯ ಲಿಂಗದಳ್ಳಿಯ ರೈತ ರಾಜಣ್ಣನವರ ಅನುಭವ.

ಹಾಲಿನ ಗುಣಮಟ್ಟ ಮತ್ತು ಇಳುವರಿ ಹೆಚ್ಚಿಸಲು

ಒಮ್ಮೊಮ್ಮೆ ಹಸು ಅಥವಾ ಎಮ್ಮೆಯ ಹಾಲು ನೀರಾಗಿದ್ದು, ವಾಸನೆ ಬರುತ್ತದೆ ಮತ್ತು ಹಾಲಿನ ಇಳುವರಿ ಕುಂಠಿತವಾಗುತ್ತದೆ. ಅಂತಹ ಸಮಯದಲ್ಲಿ ಅರಿಶಿನ, ಜೀರಿಗೆ, ಬಜೆ, ಒಣಶುಂಠಿ, ಗಜ್ಜುಗ, ಮೆಣಸಿನಕಾಳು, ಕಾಡು ಜೀರಿಗೆಯನ್ನು ಪುಡಿ ಮಾಡಿ ಈ ಪುಡಿಯನ್ನು ಜೋನಿ ಬೆಲ್ಲ ದೊಂದಿಗೆ ಬೆರೆಸಿ ಹಸುಗಳಿಗೆ / ಎಮ್ಮೆಗೆ ತಿನ್ನಿಸುವುದರಿಂದ ಉತ್ತಮ ಗುಣಮಟ್ಟದ ಹಾಲು ದೊರೆಯುತ್ತದೆ ಎಂಬ ವಿವರ ನೀಡಿರುವವರು ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರದ ವಿ. ರೋಹಿಣಿಯವರು.

ಜಾನುವಾರುಗಳ ಹೊಟ್ಟೆ ಹುಳುವಿಗೆ

ಜಾನುವಾರುಗಳ ಹೊಟ್ಟೆಯಲ್ಲಿ ಹುಳುವಾದರೆ, 20 ಬೆಳ್ಳುಳ್ಳಿಯನ್ನು ಜಜ್ಜಿ ಅದಕ್ಕೆ, ಸ್ವಲ್ಪ ಉಪ್ಪು ಹಾಕಿ ದಿನಕ್ಕೊಮ್ಮೆಯಂತೆ 4-5 ದಿನ ತಿನ್ನಿಸಿದರೆ, ಹುಳುಗಳ ಭಾಧೆಯಿಂದ ಜಾನುವಾರುಗಳನ್ನು ರಕ್ಷಿಸಬಹುದು ಎಂಬುದು ಚಿಕ್ಕಮಗಳೂರು ಜಿಲ್ಲೆಯ ಸಕ್ರಾಯಪಟ್ಟಣದ ವೆಂಕಟಪ್ಪನವರ ಅನುಭವ.

ಎಮ್ಮೆ ಬೆದೆಗೆ ಬರಲು

ತಿಪಟೂರಿನ ತಿಮ್ಮೇಗೌಡರವರು ಎಮ್ಮೆಗಳು ಸೂಕ್ತಕಾಲದಲ್ಲಿ ಬೆದೆಗೆ ಬರುವಂತೆ ಮಾಡಲು ಒಂದು ಯಶಸ್ವಿ ಪದ್ಧತಿ ಕಂಡುಕೊಂಡಿದ್ದಾರೆ. 5-6 ದಾಸವಾಳದ ಹೂಗಳನ್ನು ಮರದ ಹಲಗೆಯ ಮೇಲೆ ಜಜ್ಜಿ ಅದನ್ನು 1/2 ಲೀಟರ್ ಅಕ್ಕಿ ಗಂಜಿಯೊಂದಿಗೆ ಸೇರಿಸಿ, ತಾಮ್ರದ ಪಾತ್ರೆಯಲ್ಲಿ ಸ್ವಲ್ಪಕಾಲ ನೆನೆಯಲು ಬಿಟ್ಟು ನಂತರ ಎಮ್ಮೆಗಳಿಗೆ ಇದನ್ನು ಕುಡಿಸುವುದರಿಂದ ಎಮ್ಮೆಗಳು ಬೆದೆಗೆ ಬರುತ್ತವೆಯಂತೆ.

ಹಸುಗಳ ತೀವ್ರ ಗಾಯಕ್ಕೆ

ಹಸು, ಎಮ್ಮೆಗಳಿಗೆ ಗಾಯವಾಗಿ ಹುಳುಬಿದ್ದು, ಕೀವು ಸೋರುತ್ತಿದ್ದರೆ ಮರದಿಂದ ಕಳಚಿ ಬಿದ್ದ ಎಳೆ ಅಡಿಕೆಕಾಯಿಯನ್ನು ಸುಲಿದು, ಜಜ್ಜಿ ಗಾಯಕ್ಕೆ ಕಟ್ಟಿದರೆ, ಹುಳುಗಳು ಹೊರ ಬಿದ್ದು ಗಾಯವಾಸಿಯಾಗುತ್ತದೆ. ಅಥವಾ ಜಜ್ಜಿದ ಅಡಿಕೆಗೆ ಅರಿಶಿಣವನ್ನು ಹಾಕಿ ಕಟ್ಟಬಹುದು ಎಂಬುದು ದೇವನಹಳ್ಳಿ ತಾಲ್ಲೂಕು ದೊಡ್ಡಕೋಗಿಲು ಗ್ರಾಮದ ಮಲ್ಲೇಶ್ ರವರ ಅನುಭವ.


ಹಸುಗಳಲ್ಲಿ ಕೊಯ್ದ ಗಾಯಗಳಿಗೆ

ಒಂದು ಹಿಡಿ ಬೇವಿನ ಎಲೆಗಳನ್ನು, ಅರಿಶಿನ ಮತ್ತು ಬೆಳ್ಳುಳ್ಳಿಯೊಂದಿಗೆ ಜಜ್ಜಿ ಮುಲಾಮಿನಂತೆ ಮಾಡಿ ಒದ್ದೆ ಬಟ್ಟೆಯಿಂದ ಗಾಯಕ್ಕೆ ಕಟ್ಟುಹಾಕಿದರೆ ತರಚಿದ ಅಥವಾ ಕೊಯ್ದ ಗಾಯಗಳು ಬೇಗ ವಾಸಿಯಾಗುತ್ತವೆ ಎಂಬುದು ಚಿಕ್ಕಮಗಳೂರು ಜಿಲ್ಲೆಯ ಲಿಂಗದಳ್ಳಿ ಮಹದೇವಪ್ಪನವರ ಅನುಭವ.

ಸಂಗ್ರಹ: ಪಿ. ರವಿಕುಮಾರ್

ದನ ಕಟ್ಟುವ ಹಗ್ಗದ ಸವೆತ ತಪ್ಪಿಸಲು

ದಕ್ಷಿಣ ಕನ್ನಡ ಜಿಲ್ಲೆಯ ಕಲ್ಲಾಳದ ಭೀಮಾ ಭಟ್ ರವರು ದನಕರು ಕಟ್ಟುವ ಹಗ್ಗದ ಸವಕಲು ತಪ್ಪಿಸಲು ಒಂದು ಸುಲಭೋಪಾಯ ಅನುಸರಿಸುತ್ತಿದ್ದಾರೆ. 5-10 ಸೆಂ.ಮೀ. ಉದ್ದದ ಒಂದು ಮರದ ತುಂಡಿಗೆ ಮೂರು ತೂತುಗಳನ್ನು ಮಾಡಿ ಮಧ್ಯದ ತೂತಿನಿಂದ ಹಗ್ಗತೂರಿಸಿ, ಒಂದು ದಪ್ಪಗಂಟು ಹಾಕಿ, ನಂತರ ಹಗ್ಗದ ಒಂದು ತುದಿಯನ್ನು ಮತ್ತೊಂದು ತೂತಕ್ಕೆ ಸೇರಿಸಿ ಗೂಟಕ್ಕೆ ಕಟ್ಟಿದ್ದಾರೆ. ಇನ್ನೊಂದು ತೂತಿನಲ್ಲಿ ತೂರಿಸಿದ ಹಗ್ಗವನ್ನು ಎತ್ತಿಗೆ ಕಟ್ಟಿದ್ದಾರೆ. ಈ ರೀತಿ ಹಗ್ಗ ಕಟ್ಟುವುದರಿಂದ ಹಗ್ಗ ಬೇಗ ಸವೆದು ತುಂಡಾಗುವುದನ್ನು ತಪ್ಪಿಸಬಹುದೆಂದು ಭೀಮಾಭಟ್ ರವರು ತಿಳಿಸಿದ್ದಾರೆ.



ಕೃಪೆ: ಅಡಿಕೆ ಪತ್ರಿಕೆ, ಜನವರಿ 2001

Membership Fee for Honey Bee Network

Category	South Asia*	International
Annual Membership		
Student/Farmer	Rs.100	$20
Scientist/Professional/NGO	Rs.150	$30
Supporter	Rs.500	$50
Institution/Library	Rs.2500	$200
Life Membership		
Individual	Rs.2500	$500
Instiution/Library	Rs.10,000	$1000

** includes: India, Nepal, Bhutan, Bangladesh, Pakistan, Sri Lanka and The Maldives.*

ಶ್ರೀ ವೆಂಕಟರಾಮ ದೈತೋಟದವರ ನಾಟೀ ಔಷಧಿ ಭಂಡಾರ

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಪಾಣಾಜೆ ಗ್ರಾಮದ ಶ್ರೀ ವೆಂಕಟರಾಮ ದೈತೋಟದವರು ಗಿಡಮೂಲಿಕೆಗಳಿಂದ ನಾಟೀ ಔಷಧಿ ತಯಾರಿಸುವುದರಲ್ಲಿ ನಿಷ್ಣಾವಂತರು. ಇವರನ್ನು ಔಷಧೀಯ ಗಿಡಗಳ ಜ್ಞಾನ ಗಂಗೋತ್ರಿ, ಎಂದೇ ಕರೆಯಬಹುದು. ನಿಂತಲ್ಲಿ ಕೂತಲ್ಲಿ ನಿರರ್ಗಳವಾಗಿ ಅನೇಕಾನೇಕ ಸಸ್ಯಗಳ ಹಾಗೂ ಕಾಯಿಲೆಗಳನ್ನು ವಾಸಿ ಮಾಡುವಲ್ಲಿ ಅವುಗಳ ಪಾತ್ರ, ಬಳಕೆಯ ಪದ್ಧತಿ ಬಗ್ಗೆ ವಿವರಿಸುತ್ತಾರೆ ಮತ್ತು ಅವಶ್ಯಕವಿರುವವರಿಗೆ ಉಚಿತವಾಗಿ ಈ ಬಗ್ಗೆ ಸಲಹೆ ನೀಡುತ್ತಾರೆ. ಅವರ ಜ್ಞಾನ ಭಂಡಾರದ ಕೆಲವು ಉಪಯೋಗಗಳು ಇಲ್ಲಿವೆ.

ಗರಿಕೆ (*Cynodon dactylon*): ಗರಿಕೆಯನ್ನು ಹಾಲಲ್ಲಿ ಹಾಕಿ ಕುದಿಸಿ ಸೇವಿಸುವುದರಿಂದ ನಿಶ್ಶಕ್ತಿ ನಿವಾರಣೆಯಾಗುತ್ತದೆ ಮತ್ತು ಇದನ್ನು ಒಂದು ತಿಂಗಳು ಸೇವಿಸುವುದರಿಂದ ಶ್ವಾಸಕೋಶ ತೊಂದರೆಗಳು ದೂರವಾಗಿ, ರಕ್ತ ಶುದ್ಧಿಯಾಗುತ್ತದೆ.

ಕಡಿರು (*Malciaciae sp*): ಇದರ ಬೇರು ಮತ್ತು ಜೀರಿಗೆಯಿಂದ ಕಷಾಯ ಮಾಡಿ, ಹಾಲು ಸಕ್ಕರೆಯಲ್ಲಿ ಬೆರೆಸಿ ಸೇವಿಸುವುದರಿಂದ ಸಂಧಿವಾತ, ನರ ತೊಂದರೆಗಳನ್ನು ನಿವಾರಿಸಬಹುದು.

ದಾಸವಾಳ: ಇದರ ಮೊಗ್ಗು ಮತ್ತು ಕಲ್ಲುಸಕ್ಕರೆಯನ್ನು ಸೇವಿಸುವುದರಿಂದ ಅಥವಾ ಇದನ್ನು ಅಕ್ಕಿಯೊಂದಿಗೆ ಬೇಯಿಸಿ, ಬೆಳಗಿನ ಸಮಯದಲ್ಲಿ 1ರಿಂದ 2 ವಾರದವರೆಗೆ ಸೇವಿಸುವುದರಿಂದ ಹೊಟ್ಟೆಹುಣ್ಣಿನಿಂದ ಮುಕ್ತಿ ಪಡೆಯಬಹುದು.

ಹುಳಿಮಾವು : ಹುಳಿಮಾವಿನ ಎಲೆ ಮತ್ತು ತೊಟ್ಟು ಉಪಯೋಗಿಸಿ ಕಷಾಯ ಮಾಡಿ, ತಣ್ಣಗಾದ ನಂತರ ಜೇನು ತುಪ್ಪ ಹಾಕಿ ಸೇವಿಸಿದರೆ ಒಣಕೆಮ್ಮು ಮತ್ತು ಗಂಟಲಿನ ತೊಂದರೆಗಳು ನಿವಾರಣೆಯಾಗುತ್ತದೆ.

ಪುನರ್‌ಪುಳಿ (*Garcinia indica*): ಇದರ ಸಿಪ್ಪೆಯಿಂದ ಕಷಾಯ ಮಾಡಿ 14 ದಿನಗಳವರೆಗೆ ಸೇವಿಸುವುದರಿಂದ ರಕ್ತದಲ್ಲಿ ಹಿಮೋಗ್ಲೋಬಿನ್ ಅಂಶ ವೃದ್ಧಿಸುತ್ತದೆ ಮತ್ತು ದೇಹಕ್ಕೆ ಬೇಕಾದ ಕಬ್ಬಿಣ, ಕ್ಯಾಲ್ಸಿಯಂ ಅಂಶಗಳು ಲಭಿಸುತ್ತವೆ.

ಗೋರಂಟ / ಮೆಹಂದಿ (*Lawsonia inermis*): ಇದರ ಎಲೆ ಮತ್ತು ಬೇರಿನ ಕಷಾಯವನ್ನು ಬೆಳಗ್ಗೆ ಆಹಾರ ತೆಗೆದುಕೊಳ್ಳುವ ಮೊದಲು ಮತ್ತು ರಾತ್ರಿ ಆಹಾರ ತೆಗೆದುಕೊಂಡ ನಂತರ, 1ರಿಂದ 2 ವಾರಗಳವರೆಗೆ ಸೇವಿಸುವುದರಿಂದ ಸಂಧಿವಾತ ಮತ್ತು ಮೂಳೆ ನೋವು ನಿವಾರಣೆಯಾಗುತ್ತದೆ.

ವೀಳ್ಯದೆಲೆ: ವೀಳ್ಯದೆಲೆ ಮತ್ತು ಶುಂಠಿಯನ್ನು ಎಣ್ಣೆಯಲ್ಲಿ ಕುದಿಸಿ, ಜೋಮು ಹಿಡಿದ ಭಾಗಕ್ಕೆ ಅಥವಾ ನರ ಹಿಡಿದ / ಗಂಟಾದ ಜಾಗಕ್ಕೆ ಹಚ್ಚಬಹುದು.

ಲೋಳೆಸರ (*Aloe vera*): ಇದರ ಕಂದು ಬಣ್ಣದ ಲೋಳೆ ಭಾಗವನ್ನು ತೆಗೆದು, ನೀರಿನಲ್ಲಿ ಹಾಕಿ ಮುಳುಗಿಸಿ, ನಂತರ ಒಂದು ಚಮಚ ಲೋಳೆ, ಒಂದು ಕಾಳು ಮೆಣಸು, ಜೀರಿಗೆ ಮತ್ತು ಕಲ್ಲು ಸಕ್ಕರೆ ಸೇರಿಸಿ ಜಗಿದು ನುಂಗುವುದರಿಂದ ಪಿತ್ತ, ತಲೆ ತಿರುಗುವುದು, ರಕ್ತದ ಒತ್ತಡ, ಮೈಕೈ ನೋವು ಶಮನವಾಗುತ್ತದೆ.

ಆನೆಕಾಲು ಬಾವು ನಿವಾರಣೆಗೆ : ಹಳದಿ ಗರಗ ಗಿಡ (*Wedelia colendulaceae*) ವನ್ನು ಕಿತ್ತುತಂದು, ಸ್ವಲ್ಪ ಉಪ್ಪಿನೊಂದಿಗೆ ಮಜ್ಜಿಗೆ ಅಥವಾ ಅನ್ನದ ಗಂಜಿಯಲ್ಲಿ ಅರೆದು ಲೇಪಿಸಬೇಕು. ಈ ರೀತಿ ದಿನಕ್ಕೆ 3 ಗಂಟೆಯಂತೆ, ವಾರಕ್ಕೆ, ಮೂರು ದಿನ 2-3 ತಿಂಗಳು ಮಾಡುವುದರಿಂದ ಆನೆಕಾಲು ಬಾವು ನಿವಾರಣೆಯಾಗುತ್ತದೆ.

ಅತಿ ನಿದ್ರೆಗೆ ಪರಿಹಾರ : ಕಿರು ಬ್ರಾಹ್ಮಿ (*Hydrocotyle rotundrifolia*) ಅಥವಾ ಕಿರಿ ಒಂದೆಲಗದ ಸೊಪ್ಪನ್ನು ಒಂದು ಹಿಡಿ ತಂದು, 4 ಚಿಟಿಕೆ ಜೀರಿಗೆ ಸೇರಿಸಿ, ಒಂದು ಲೋಟ ತೆಳು ಮಜ್ಜಿಗೆಯಲ್ಲಿ ಅರೆದು, ಬೆಳಗ್ಗೆ ಬರಿಹೊಟ್ಟೆಗೆ ಸೇವನೆ. 1-2 ವಾರ ಸೇವಿಸುವುದರಿಂದ ಅತಿ ನಿದ್ರೆ ಪರಿಹಾರವಾಗುತ್ತದೆ.

ಉಸಿರು ಸಿಕ್ಕಿ ಕೊಂಡಾಗ : ಕೆಲವೊಮ್ಮೆ ಉಸಿರು ಸಿಕ್ಕಿಕೊಂಡಂತಾಗಿ ಉಸಿರಾಟಕ್ಕೆ ತೊಂದರೆಯಾಗುತ್ತದೆ. ಇದನ್ನು ನಿವಾರಿಸಲು ಹಾದಿಕಸದ ಗಿಡದ ಒಂದು ಹಿಡಿ ಎಲೆಯನ್ನು ಒಂದು ಲೋಟ ನೀರಿನಲ್ಲಿ ಕುದಿಸಿ, ಒಮ್ಮೆಗೆ ಅರ್ಧ ಲೋಟದಂತೆ ದಿನಕ್ಕೆ 2 ಅಥವಾ 3 ಬಾರಿ ಸೇವಿಸುವುದರಿಂದ ಉಸಿರು ಸಿಕ್ಕುಹಾಕುವುದು ಮತ್ತು ಉಬ್ಬಸ, ಕೆಮ್ಮು ಸಹ ಗುಣವಾಗುತ್ತದೆ.

ದೀರ್ಘಕಾಲದ ತಲೆನೋವು ನಿವಾರಣೆಗೆ: ಸೀಹಾಗಲ ಬಳ್ಳಿಯ (*Momordica dioica*) ಎಲೆಗಳನ್ನು ಅರೆದು ಅದರ ರಸಕ್ಕೆ ಒಂದೆರಡು ಕಾಳು ಮೆಣಸು ಅಥವಾ ಒಣಶುಂಠಿ ಮತ್ತು ತೇವ ರಕ್ತ ಚಂದನ ಸೇರಿಸಿ, ಹಣೆಗೆ 3 ಗಂಟೆ ಹಚ್ಚಬೇಕು. ಹಾಗೇ ಅತಿ ಬೆವರಿನ ಚರ್ಮ ರೋಗಗಳ ನಿವಾರಣೆಗೂ ಸೀಹಾಗಲದ ಬೇರು ಮತ್ತು ಎಲೆಗಳನ್ನು ಚೆನ್ನಾಗಿ ಅರೆದು ಮೈಗೆ ಲೇಪಿಸಿ 1-3 ಗಂಟೆಯ ನಂತರ ತೊಳೆಯಬಹುದು.

ನಿರಂತರ ವಾಂತಿ ನಿವಾರಿಸಲು: ಕೆಲವೊಮ್ಮೆ ಏನು ತಿಂದರೂ ವಾಂತಿಯಾಗುತ್ತಿರುತ್ತದೆ. ನೀರು ಕುಡಿದರೂ ದಕ್ಕುವುದಿಲ್ಲ. ಅಂತಹ ಸಂದರ್ಭದಲ್ಲಿ ಕತ್ರಿಸೇಣಿ ಗಿಡ (*Impatiens flaccida*) ವನ್ನು ಸಮೂಲ ಶುದ್ಧ ಪಡಿಸಿ, ಒಂದು ಹಿಡಿ ತೆಗೆದುಕೊಂಡು ಅದಕ್ಕೆ ನಾಲ್ಕು ಚಿಟಿಕೆ ಜೀರಿಗೆ ಹಾಕಿ, ಒಂದು ಲೋಟ ಸಿಹಿ ಮಜ್ಜಿಗೆಯಲ್ಲಿ ಅರೆದು, ಚೆನ್ನಾಗಿ ಕುದಿಸಿ, 2-3 ಏಲಕ್ಕಿ ಕಾಳು ಹಾಕಿ, ಒಮ್ಮೆಗೆ 2 ಚಮಚದಂತೆ ಒಂದು ದಿನ ಸೇವಿಸಬೇಕು.

ಅನಿಯತ ಮೂತ್ರ ಪ್ರವೃತ್ತಿ ಸಮಸ್ಯೆಗೆ: ಗದ್ದೆ ನೆಕ್ಕರೆ (*Oldelandia auricularia*) ಯನ್ನು ಬೇರು ಸಹಿತ ಕಿತ್ತು ತಂದು ಸ್ವಚ್ಛಗೊಳಿಸಿ ಅರ್ಧಹಿಡಿ ತೆಗೆದುಕೊಂಡು, ಒಗ್ಗರಣೆಗೆ ಉಪಯೋಗಿಸುವ ಕರಿಬೇವಿನ ಎಲೆ ಕಾಲು ಹಿಡಿ ತೆಗೆದುಕೊಂಡು, ಇವುಗಳನ್ನು ಒಂದು ಲೋಟ ಕಾದಾರಿದ ನೀರಿನಲ್ಲಿ ಅರೆದು, ಬೆಳಗ್ಗೆ ಖಾಲಿ ಹೊಟ್ಟೆಗೆ ಒಂದು ವಾರದವರೆಗೆ ಸೇವಿಸಬೇಕು.

ಚರ್ಮರೋಗಗಳಿಗೆ: ಚರ್ಮದ ರೋಗಗಳನ್ನು ನಿವಾರಿಸಲು ಆನೆತಗತ್ತೆ (*Cassia alasa*) ಎಲೆಯನ್ನು ಎರಡು ಹಿಡಿ ತೆಗೆದುಕೊಂಡು, 2 ಚಮಚ ಉಪ್ಪು ಸೇರಿಸಿ, ಅರೆದು ಚರ್ಮಕ್ಕೆ ಲೇಪಿಸಬೇಕು. ಒಣಗಿದ ನಂತರ ಪುನ: ಲೇಪಿಸಬೇಕು. ಮೂರು ಗಂಟೆಗಳ ನಂತರ ತೊಳೆಯಬೇಕು. ಇದನ್ನು 5-6 ದಿನ ಮುಂದುವರಿಸಬೇಕು.

ಕೊಡಿಗೇನ ಹಳ್ಳಿಯ ರಾಗಿ ತಳಿ ವೈವಿಧ್ಯತೆ

ಮೂರು ತಿಂಗಳ ರಾಗಿ: ಇದು ಹೆಸರೇ ಹೇಳುವಂತೆ ಮೂರು ತಿಂಗಳ ಬೆಳೆಯಾಗಿರುತ್ತದೆ. ಇದಕ್ಕೆ ನೀರಿನ ಅವಶ್ಯಕತೆ ಬೇಕೇ ಬೇಕು. ನೀರಿನ ಪ್ರಮಾಣ ಕಡಿಮೆಯಾದರೆ ತಡೆಯುವ ಶಕ್ತಿ ಇರುವುದಿಲ್ಲ. ಈ ತಳಿಯು ಏಪ್ರಿಲ್‌ನಿಂದ ಜೂನ್‌ವರೆಗೆ ಯಾವಾಗ ಹಾಕಿದರೂ ಬರುತ್ತದೆ.

ಕಪ್ಪುಗಿಡ್ಡರಾಗಿ: ಈ ತಳಿಯೂ ಸಹ ಹೆಸರೇ ಹೇಳುವಂತೆ ತೆನೆಯು ಕಪ್ಪಾಗಿರುತ್ತದೆ. ಕಡಿಮೆ ಅಥವಾ ಹೆಚ್ಚು ನೀರನ್ನು ತಡೆಯುವ ಶಕ್ತಿ ಹೊಂದಿದೆ. ಇದರಲ್ಲಿ ಹೊಟ್ಟು ಬಹಳ ಇರುತ್ತದೆ. ಇದು ನಾಲ್ಕು ತಿಂಗಳ ಬೆಳೆಯಾಗಿರುತ್ತದೆ.

ಬೆಟ್ಟದ ಕೆಳಗಿನ ರಾಗಿ: ಇದು ಮಳೆ ಆಶ್ರಯದಲ್ಲಿ ಬೆಳೆಯುವಂತಹ ಬೆಳೆಯಾಗಿದ್ದು ನೀರಿನ ಅನುಕೂಲ ಕಡಿಮೆ ಇರುವ ಕಡೆ ಬೆಳೆಯುತ್ತಾರೆ. ಈ ತಳಿಗೆ ರೋಗಗಳ ಭಾದೆ ಹೆಚ್ಚಾಗಿ ಕಾಣಿಸುವುದಿಲ್ಲ.

ಇಲ್ಲಿ ಇಂಡಾಫ್ ರಾಗಿ ಬೆಳೆಗಳನ್ನು ಬೆಳೆಯುವುದು ಬಹಳ ಕಡಿಮೆ. ಏಕೆಂದರೆ ಇಳುವರಿ ಚೆನ್ನಾಗಿ ಬಂದರೂ ನಾವು ತಿನ್ನುವುದಕ್ಕೆ ರುಚಿ ಇರುವುದಿಲ್ಲ ಎಂಬುದು ತುಮಕೂರು ಜಿಲ್ಲೆಯ, ಮಧುಗಿರಿ ತಾಲ್ಲೂಕು, ಕೊಡಿಗೇನ ಹಳ್ಳಿಯ ಜನರ ಅಭಿಪ್ರಾಯವಾಗಿರುತ್ತದೆ.

- ಸಂಗ್ರಹ: ಕೆ.ಪಿ. ಲಕ್ಷ್ಮೀಶರೆಡ್ಡಿ, ಕೊಡಿಗೇನ ಹಳ್ಳಿ

ಮಂಡಕ್ಕಿಗೆಂದೇ ಮೀಸಲಾಗಿಟ್ಟ ಮತ್ತಾವರದ ಭತ್ತ

ಭತ್ತ ಎಂದರೆ ಮುಂದಿನ ಶಬ್ಧ ಅನ್ನ. ಆದರೆ ಅನ್ನಕ್ಕೆ ಸರಿಹೊಂದದ ಭತ್ತವನ್ನು ಸುಮಾರು ನಾಲ್ಕು ನೂರು ಎಕರೆ ಪ್ರದೇಶದಲ್ಲಿ ಬೇಸಾಯ ಮಾಡಿ ಬೆಳೆಸುತ್ತಾರಂತೆ ಮತ್ತಾವರದ ರೈತರು. ಮತ್ತಾವರ ಚಿಕ್ಕಮಗಳೂರು ಜಿಲ್ಲೆಗೆ ಸೇರಿದ ಸಣ್ಣ ಹಳ್ಳಿ. ಈ ಮತ್ತಾವರದ ಭತ್ತ ಮಂಡಕ್ಕಿ ಮಾಡಲು ಮಾತ್ರ ಸೀಮಿತ. ಸಿಹಿಯಾದ ರುಚಿ ಇರುವ ಈ ಭತ್ತದ ಕಾಳು ದಪ್ಪ ಮತ್ತು ಉದ್ದ. ಹೊಳೆದಾಲಗ ಚಿಪ್ಪ ಮತ್ತು ಮತ್ತಾವರದ ಕೆರೆ ಭತ್ತ ಎಂಬ ಎರಡು ತಳಿಗಳಿವೆ. ಎಕರೆಗೆ ಸುಮಾರು 25 ಚೀಲ ಇಳುವರಿ ದೊರಕುವ ಈ ಭತ್ತ ಆರು ತಿಂಗಳ ಬೆಳೆ.

ಅಶ್ವಿನಿ, ಭರಣಿ ಮಳೆಯ ನಂತರ ಗದ್ದೆಯನ್ನು ಹದಗೊಳಿಸಿ ಎಕರೆಗೆ ಸುಮಾರು 45 ಕೆ.ಜಿ. ಬೀಜ ಬಿತ್ತುತ್ತಾರೆ. ಎಕರೆಗೆ ಕನಿಷ್ಠ ಇಪ್ಪತ್ತೈದು ಕೆ.ಜಿ. ಇಳುವರಿ ಕೊಡುವ ಈ ಭತ್ತದಿಂದ ಜಾನುವಾರುಗಳಿಗೆ ಅಗತ್ಯವಾದ ಹುಲ್ಲು ಕೂಡಾ ಧಾರಾಳವಾಗಿ ದೊರೆಯುತ್ತದಂತೆ. ಮೂರು ಅಡಿ ಎತ್ತರ ಬೆಳೆಯುವ ಭತ್ತದ ಹುಲ್ಲು, ಕನಿಷ್ಠ ಎಂದರೂ 100 ಹೊರೆಯಷ್ಟು (ಒಂದು ಟ್ರ್ಯಾಕ್ಟರ್) ದೊರಕಿ, ಹುಲ್ಲಿನಿಂದಲೇ ಏನಿಲ್ಲವೆಂದರೂ ರೂ.2000 ಆದಾಯವಿದೆಯಂತೆ. ಪ್ರತಿ ಕ್ವಿಂಟಾಲ್ ಚೀಲಕ್ಕೆ ಸರಾಸರಿ ರೂ.800ಗಳಿಂದ ಸಾವಿರ ರೂಪಾಯಿ ಇರುವ ಈ ಭತ್ತಕ್ಕೆ ದೂರದ ಮಹಾರಾಷ್ಟ್ರದಿಂದ ಕೂಡಾ ಬೇಡಿಕೆಯಿದೆ.

ಮೂಲ ಲೇಖನ: ರಾಘವೇಂದ್ರ

ಕೃಪೆ : ಪ್ರಜಾವಾಣಿ, 9/1/2002

ಮಹದೇಶ್ವರ ಮಹಿಳಾ ಬೀಜ ಸಂಘ

ಹಿಂದಿನ ಕಾಲದಲ್ಲಿ 19 ಸದಸ್ಯರಿರುವ ನಮ್ಮ ಮನೆಯಲ್ಲಿ ಒಂದು ಮೊರ ರಾಗಿ ಹಿಟ್ಟು ಹಾಕಿ ಮುದ್ದೆ ಮಾಡಿ, ಎಲ್ಲರೂ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದೆವು. ಆದರೆ ಈಗ ಮೂರು ಮೊರ ರಾಗಿ ಹಿಟ್ಟು ಹಾಕಿ ಮುದ್ದೆ ಮಾಡಿದರೂ ಸಾಕಾಗುವುದಿಲ್ಲ ಎಂದು ಹೇಳುವ ಮದ್ದೂರಮ್ಮನ ಮಾತಿನಲ್ಲೇ ನಮ್ಮದೇ ಆದ ಹಳೆಯ ಮತ್ತು ಸ್ಥಳೀಯ ರಾಗಿ ತಳಿಯ ವೈಶಿಷ್ಟ್ಯವನ್ನು ಗುರುತಿಸಬಹುದು.

ಹಳೇ ತಳಿಗಳಿಂದ ಒದಗುತ್ತಿದ್ದ ಉತ್ತಮ ಗುಣಮಟ್ಟದ ರಾಗಿ, ಇಂದಿನ ಹೈಬ್ರಿಡ್ ತಳಿಗಳಿಂದ ಸಿಗುತ್ತಿಲ್ಲ ಎಂಬುದನ್ನು ಮನಗಂಡ ಮದ್ದೂರಮ್ಮ ಸ್ವಯಂ ಪ್ರೇರಣೆಯಿಂದ ಹಳೇ ತಳಿಗಳನ್ನು ಸಂರಕ್ಷಿಸಲು ಮುಂದಾದರು. ಅವರು ಮಾಡಿದ ಮೊದಲ ಕಾರ್ಯವೇ ನಶಿಸುವ ಹಂತದಲ್ಲಿದ್ದ ಅವರ ತಾತನ ಕಾಲದ ರಾಗಿಯನ್ನು ಸಂಗ್ರಹಿಸಿ, ಅದನ್ನೇ ಬೆಳೆಸಿ ಅಧಿಕ ಬೀಜೋತ್ಪಾದನೆ ಮಾಡಿ ತನ್ನ ನೆರೆ-ಹೊರೆಯವರಿಗೆ ಹಂಚಿದರು. ರಾಗಿ ಸಂಗ್ರಹದಿಂದ ಆರಂಭವಾದ ಅವರ ಕಾರ್ಯ ನಂತರ ಭತ್ತ ಮತ್ತು ಎಲ್ಲಾ ತರಹದ ತರಕಾರಿ ಬೆಳೆಗಳವರೆಗೆ ಹಬ್ಬಲಾರಂಭಿಸಿತ್ತು. ಇವರ ಉತ್ಸಾಹ, ಉತ್ತಮ ಕಾರ್ಯದಿಂದ ಪ್ರಭಾವಿತರಾದ ಇತರೇ ಮಹಿಳೆಯರು, ಬೀಜ ಸಂಗ್ರಹಕ್ಕೆ ಮುಂದಾದರು. ಏಕ ವ್ಯಕ್ತಿಯಿಂದ ಪ್ರಾರಂಭವಾದ ಕಾರ್ಯ ಸಂಘದ ರೂಪ ಪಡೆಯಿತು.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕನಕಪುರ ತಾಲ್ಲೂಕು ತೇರುಬೀದಿಯ ಮಹದೇಶ್ವರ ಮಹಿಳಾ ಸಂಘದಲ್ಲಿ ಸುಮಾರು 60 ಜನ ಮಹಿಳೆಯರು ಕಾರ್ಯಗತವಾಗಿರುವುದು ಹೆಮ್ಮೆಯ ವಿಷಯ. ತಮ್ಮ ಕೂಲಿ ದುಡಿಮೆಯಲ್ಲೇ ಒಂದು ಸಣ್ಣ ಮನೆಯನ್ನು ಬಾಡಿಗೆಗೆ ಕೊಂಡು ಅದರಲ್ಲಿ ವಿವಿಧ ಬಗೆಯ ದೇಶೀಯ ತಳಿಗಳ ಬೀಜಗಳನ್ನು ಸಂಗ್ರಹಿಸುತ್ತಿದ್ದಾರೆ. ತಮ್ಮ ಮನೆಗಳ ಹಿತ್ತಲಲ್ಲಿ ಆ ಬೀಜಗಳನ್ನು ಬಿತ್ತಿ, ಬೀಜೋತ್ಪಾದನೆ ಮಾಡುತ್ತಿದ್ದಾರೆ. ಇದರ ಹಿರಿಮೆ ಅರಿತ ಅನೇಕಾನೇಕ ರೈತರು ಮತ್ತು ದೇಶ ವಿದೇಶದ ವಿಜ್ಞಾನಿಗಳು, ಪತ್ರಕರ್ತರು ಈ ಸಂಘಕ್ಕೆ ಭೇಟಿ ಕೊಡುತ್ತಿದ್ದಾರೆ. ಆಸಕ್ತ ರೈತರು ಇವರಿಂದ ಹಳೇ ತಳಿಗಳ ಬೀಜಗಳನ್ನು ಅಲ್ಪ ಪ್ರಮಾಣದಲ್ಲಿ ಪಡೆದು ತಮ್ಮ ಹೊಲಗಳಲ್ಲಿ ಬಿತ್ತಿ ಬೆಳೆದು ಕೃತಜ್ಞತಾ ಭಾವದಿಂದ ಮತ್ತೆ ಬೆಳೆದಿದ್ದರಲ್ಲಿ ಸಂಘಕ್ಕೆ ಬೀಜಗಳನ್ನು ಕೊಡುತ್ತಿದ್ದಾರೆ.

ಖುಷ್ಕಿ ಭೂಮಿಯಲ್ಲಿ ಬೆಳೆಯಬಹುದಾದ ಬೇಸಿಗೆ ಹಾಗೂ ಬಯಲು ಭತ್ತದಿಂದ ಹಿಡಿದು, ಉತ್ಕೃಷ್ಟ ರುಚಿ ನೀಡುವ ಕೆಂಪನ್ನದ ಭತ್ತದ ವರೆಗೆ ಸುಮಾರು 7 ಬಗೆಯ ಹಳೇ ತಳಿಯ ಭತ್ತ 9 ಬಗೆಯ ಹಳೇರಾಗಿ ಮತ್ತು ಹನ್ನೆರಡು ಬಗೆಯ ವಿವಿಧ ತರಕಾರಿಗಳ ಬೀಜಗಳು ಈ ಸಂಘದಲ್ಲಿ ಲಭ್ಯ.

ಪ್ರತಿಯೊಂದು ತಳಿಯ ಗುಣ ವಿಶೇಷಗಳನ್ನು ಸರಾಗವಾಗಿ ವಿವರಿಸಿ ಹೇಳುವ ಮದ್ದೂರಮ್ಮ, ಮಹದೇವಮ್ಮ ಮುಂತಾದವರ ಉತ್ಸಾಹ ಎಂಥಹವರನ್ನು ಬೆರಗುಗೊಳಿಸುತ್ತದೆ.

ಅಧಿಕ ಇಳುವರಿ ನೀಡುವ ತಳಿಗಳು, ಹೈಬ್ರಿಡ್ ತಳಿಗಳು ಮತ್ತು ಜೈವಿಕ ತಂತ್ರಜ್ಞಾನದ ಅತ್ಯಾಧುನಿಕ ತಳಿಗಳ ಹಣಾಹಣಿಯಲ್ಲಿ ನಮ್ಮ ಸ್ಥಳೀಯ ಮತ್ತು ಹಳೇ ತಳಿಗಳ ಹೆಸರುಗಳೂ ಸಹ ಕೇಳಲಾಗದಿರುವಂತಹ ಪ್ರಸ್ತುತ ಸಮಯದಲ್ಲಿ ಮದ್ದೂರಮ್ಮನ ಹಳೇ ತಳಿಗಳ ಬೀಜ ಭಂಡಾರ ಅತ್ಯದ್ಭುತ ಸಾಧನೆಯೇ ಸರಿ.

- ಸಂಗ್ರಹ ಲೇಖನ: ಎಸ್. ಜಿ. ಶಶಿಕಲಾ

ಬಸವನಗುಡಿಯ ಕಡಲೇಕಾಯಿ ಪರಿಷೆ - ಪಟ್ಟಣದಲ್ಲಿ ಗಟ್ಟಿಯಾಗುಳಿದಿರುವ ಹಿತ್ತಲಗಿಡ

ಸಂಗ್ರಹ ಲೇಖನ: ಎಸ್.ಜಿ. ಶಶಿಕಲ

ಗ್ರಾಮಾಂತರ ಪ್ರದೇಶಗಳಲ್ಲಿ ಸುಗ್ಗಿ ಕಾಲದಲ್ಲಿ ಜಾತ್ರೆಗಳು ನಡೆಯುವುದು ಸರ್ವೇಸಾಮಾನ್ಯ. ದನಗಳ ಮತ್ತು ಜನಗಳ ಜಾತ್ರೆ, ಸೇರಿ ಊರ ದೇವರ ಉತ್ಸವ ಮಾಡುವುದು ಸಾಂಪ್ರಾದಾಯಿಕ ಪದ್ಧತಿ. ಆದರೆ ಒಂದು ಬೆಳೆಯನ್ನು ಕೇಂದ್ರ ಬಿಂದುವಾಗಿ ಇಟ್ಟುಕೊಂಡು ಪರಿಷೆ (ಜಾತ್ರೆ) ನಡೆಸುವುದು ಅಪರೂಪ. ವಿಶಿಷ್ಟವಾದ ಕಡಲೇಕಾಯಿಯ ಇಂತಹ ಪರಿಷೆ ಸುಮಾರು ವರ್ಷಗಳಿಂದ ಬೆಂಗಳೂರಿನ ಬಸವನಗುಡಿಯ ಆವರಣದಲ್ಲಿ ನಡೆಯುತ್ತಿದೆ ಅಂದರೆ ನಂಬಲು ಸಾಧ್ಯವೇ ? ಈ ಪರಿಷೆಯು ಪ್ರತಿ ವರ್ಷ ಉತ್ಥಾನ ದ್ವಾದಶಿಯ ದಿನವೇ ನಡೆಯುತ್ತದೆ. ಈ ವರ್ಷ ನವಂಬರ್ 26-27ರಂದು ನಡೆಯಿತು.

ಬಸವನಗುಡಿಯಲ್ಲೇ ನಡೆಯುವ ಈ ಜಾತ್ರೆಗೆ ಅದರದ್ದೇ ಆದ ಹಿನ್ನಲೆ ಇದೆ. ಹಿಂದೆ ಒಮ್ಮೆ ತಮ್ಮ ಕಡಲೇಕಾಯಿ ಹೊಲಗಳಿಗೆ ಸುಗ್ಗಿ ಹಾನಿ ಮಾಡುತ್ತಿದ್ದ ಬಸವನನ್ನು ರೈತರು ಅಟ್ಟಿಸಿಕೊಂಡು ಬಂದಾಗ, ಅದು ಓಡಿ ಬಂದು, ಪ್ರಸ್ತುತ ಬಸವನಗುಡಿಯ ಬಸವ ಮಂದಿರದಲ್ಲಿ ಎಲ್ಲರ ಕಣ್ಮುಂದೆಯೇ ಕಲ್ಲಾಗಿ ಶಿಲೆಯಾಯಿತಂತೆ. ಆ ದೈವ ಸ್ವರೂಪದ ಬಸವನ ನೆನಪಿಗಾಗಿ ಪ್ರತಿ ವರ್ಷವೂ ರೈತರು ಇದೇ ಸ್ಥಳದಲ್ಲಿ ತಾವು ಬೆಳೆದ ಕಡಲೇ ಕಾಯಿಯನ್ನು ಕೊಯ್ದು ತಂದು ಬಸವನಿಗೆ ಎಡೆ ಅರ್ಪಿಸಿ, ನಂತರ ಮಾರಾಟ ಮಾಡುತ್ತಾರೆ.

ಇದೊಂದು ಮಧ್ಯವರ್ತಿಗಳಿಂದ ಮುಕ್ತವಾದ ರೈತರ ಮತ್ತು ಗ್ರಾಹಕರ ವಿಶಿಷ್ಟ ಸಮ್ಮಿಲನವೇ ಸರಿ. ಕರ್ನಾಟಕದ ಕಡಲೇಕಾಯಿ ಅಷ್ಟೇ ಅಲ್ಲದೇ ಆಂಧ್ರ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳ ಕಡಲೇಕಾಯಿಗಳೂ ಈ ಪರಿಷೆಯಲ್ಲಿ ಸಿಗುತ್ತದೆ. ಕಡಲೇಕಾಯಿಯ ಹಳೇ ಮತ್ತು ಸ್ಥಳೀಯ ನಾಟಿ ತಳಿಗಳು ಮಾತ್ರವಲ್ಲದೇ ಇತ್ತೀಚಿನ ಅಧಿಕ ಇಳುವರಿ ತಳಿಗಳು ಹಾಗೂ ಹೈಬ್ರಿಡ್ ತಳಿಗಳು ಕೂಡಾ ಇಲ್ಲಿ ಲಭ್ಯ.

ಕರ್ನಾಟಕದ ಹೊಸೂರಿನ ಮಹದೇವಪ್ಪನವರು 10 ವರ್ಷದಿಂದ ಈ ಪರಿಷೆಯಲ್ಲಿ ಭಾಗವಹಿಸಿ, ತಾವು ಬೆಳೆದ 'ಮೂರು ಬೀಜ'ದ ಕಡಲೇಕಾಯಿಯನ್ನು ಮಾರುತ್ತಾರೆ.

ತಮಿಳುನಾಡಿನ ಧರ್ಮಪುರಿಯ ಮುರುಗನ್‌ರವರು ಸುಮಾರು 15 ವರ್ಷಗಳಿಂದ, ಈ ಪರಿಷೆಗೆ ಬರುತ್ತಿದ್ದು ಅವರು ಧರ್ಮಪುರಿ ನಾಟಿ ತಳಿಯ ಕಡಲೇಕಾಯಿಯನ್ನು ಬೆಳೆದು, ಪರಿಷೆಗೆ ತರುತ್ತಾರೆ. ಇವರು ಇದುವರೆವಿಗೂ ಯಾವುದೇ ಅಂಗಡಿಯಿಂದ ಕಡಲೇಕಾಯಿ ಬೀಜ ಕೊಂಡು ತಂದು ತಮ್ಮ ಹೊಲಕ್ಕೆ ಬಿತ್ತಿಲ್ಲ. ಅವರ ತಾತ, ಮುತ್ತಾತಂದಿರ ಕಾಲದಿಂದ ಕಡಲೇಕಾಯಿ ಬೆಳೆಯುತ್ತಿದ್ದು ಅದೇ ಬೀಜವನ್ನು ಬಿತ್ತನೆಗೆ ಬಳಸುತ್ತಿದ್ದು ಅದರಿಂದ ಉತ್ತಮ ಇಳುವರಿ ಪಡೆಯುತ್ತಿದ್ದಾರೆ.

ಹೊಸೂರಿನ ಕೃಷ್ಣಮೂರ್ತಿಯವರು, 8 ವರ್ಷಗಳಿಂದ ಕಡಲೇಕಾಯಿ ಪರಿಷೆಗೆ, ತಾವು ಬೆಳೆಯುವ 'ರಸಕಾಯಿ' ನಾಟೀ ಕಡಲೇಕಾಯಿ ತರುತ್ತಾರೆ. ಒಂದು ಎಕರೆಗೆ 8 ಕ್ವಿಂಟಾಲ್‌ನಷ್ಟು ಇಳುವರಿ ನೀಡುವ ಈ ನಾಟೀ ತಳಿಯು ತಿನ್ನಲು ಬಹಳ ರುಚಿಕರವಾಗಿ ಸಿಹಿಯಾಗಿ ಇರುವುದರಿಂದ ಇದನ್ನು ರಸಕಾಯಿ ಎಂದು ಅವರು ಕರೆಯುತ್ತಾರೆ.

ತಮಿಳುನಾಡಿನ ದೇವಪ್ಪನವರು, ತಾವು ಬೆಳೆಯುವ ಅಣಬು ನಾಟೀ ತಳಿಯ ಕಡಲೇಕಾಯಿಯನ್ನು 7 ವರ್ಷಗಳಿಂದ ಈ ಪರಿಷೆಗೆ ತರುತ್ತಿದ್ದಾರೆ. ಇದಕ್ಕೂ ಹಿಂದೆ ಸುಮಾರು 10-20 ವರ್ಷಗಳಿಂದ ಅವರ ತಂದೆಯವರು ಈ ಪರಿಷೆಯಲ್ಲಿ ಭಾಗವಹಿಸುತ್ತಿದ್ದರಂತೆ. ಈ ಕಡಲೇಕಾಯಿ ತಳಿ ಸಹ ಅವರ ಹಿರಿಯರು, ಬಹಳ ಹಿಂದಿನ ತಲೆಮಾರುಗಳಿಂದ ಬೆಳೆಯುತ್ತಿದ್ದಾರೆ, ಎಂಬುದು ಅವರು ನೀಡಿದ ಮಾಹಿತಿ.

ಮಾಗಡಿಯ ಶಿವಲಿಂಗಯ್ಯ, ಮೂರ್ತಿ, ಶಿವಕುಮಾರ್ ಮತ್ತು ಗುಳ್ಳಪ್ಪ ಎಂಬ ರೈತರುಗಳು 10-15 ವರ್ಷಗಳಿಂದ ಬಸವನಗುಡಿಯ ಪರಿಷೆಯಲ್ಲಿ ಭಾಗವಹಿಸುತ್ತಿದ್ದಾರೆ. ಇವರು ಮಾಗಡಿಯ ಕಡಲೇಕಾಯಿ ತಳಿ ಬೆಳೆಯುತ್ತಿದ್ದು, ಇದರಿಂದ ಒಂದು ಎಕರೆಗೆ 10-15 ಕ್ವಿಂಟಾಲ್ ಇಳುವರಿ ಪಡೆಯುತ್ತಿದ್ದಾರೆ. ಈ ಮಾಗಡಿ ತಳಿಯು ಇತರೆ ಕಡಲೇಕಾಯಿ ತಳಿಗಳಿಗಿಂತ ಸಿಹಿಯಾಗಿದ್ದು, ಅಧಿಕ ಇಳುವರಿ ನೀಡುತ್ತಿದೆ. ಇತರೆ ತಳಿಗಳು ಬೆಳೆಯಲು 5 ತಿಂಗಳ ಕಾಲಾವಧಿ ಬೇಕಾಗುತ್ತದೆ. ಆದರೆ ಈ ತಳಿಯನ್ನು 3 ತಿಂಗಳಲ್ಲಿ ಬೆಳೆಯಬಹುದಾಗಿರುವುದು ಇದರ ವಿಶೇಷ ಗುಣ.

ಆಂಧ್ರಪ್ರದೇಶದ ಗುಂಡಾರಲ ಹಳ್ಳಿಯ ಬಸವರಾಜು ಎಂಬ ರೈತರು, 8 ವರ್ಷಗಳಿಂದ ಈ ಕಡಲೇಕಾಯಿ ಪರಿಷೆಗೆ ತಾವು ಬೆಳೆದ ಜಿ.ಎಲ್. ಕಡಲೇಕಾಯಿಯನ್ನು ತರುತ್ತಾರೆ. ಇದು ಅಧಿಕ ಇಳುವರಿ ನೀಡುವ ತಳಿಯಾಗಿದ್ದು, 3 ತಿಂಗಳಲ್ಲಿ ಇಳುವರಿ ನೀಡುತ್ತದೆ. ಆದರೆ, ಇದರ ರುಚಿ ಮಾಗಡಿ ಕಡಲೇಕಾಯಿಯಷ್ಟು ಸಿಹಿಯಾಗಿರುವುದಿಲ್ಲ ಎಂಬುದು ಅವರ ಅಭಿಪ್ರಾಯ.

ಧರ್ಮಪುರಿಯ ಪೆರಮಾನ್‌ರವರು 'ಎರಡು ಬೀಜ' ದ ನಾಟಿ ಕಾಯಿ ಎಂಬ ಸ್ಥಳೀಯ ನಾಟೀ ಕಡಲೇಕಾಯಿಯನ್ನು ಬೆಳೆದು, 12 ವರ್ಷಗಳಿಂದ ಬಸವನಗುಡಿಯ ಕಡಲೇಕಾಯಿ ಪರಿಷೆಗೆ ತರುತ್ತಿದ್ದಾರೆ. ಬೇರೆ ಕಡೆ ಮಾರಾಟ ಮಾಡುವುದಕ್ಕಿಂತ ಮುಂಚೆ ಕೊಯ್ಲು ಮಾಡಿದ ಕಡಲೇಕಾಯಿಯನ್ನು ಬಸವನಗುಡಿ ಪರಿಷೆಗೆ ತಂದು ಎಡೆಕೊಟ್ಟು ಮಾರಾಟ ಮಾಡಿದರೆ, ಅಧಿಕ ಲಾಭ ಸಿಗುತ್ತದೆ ಮತ್ತು ಮುಂದಿನ ವರ್ಷ ಸಹ ಉತ್ತಮ ಇಳುವರಿ ಸಿಗುತ್ತದೆ ಎಂಬುದು ಅವರ ನಂಬಿಕೆ.

ಚಳ್ಳಕೆರೆಯ ಕೆಂಪಯ್ಯ ಎಂಬ ರೈತರು, 8 ವರ್ಷಗಳಿಂದ ಕಡಲೇಕಾಯಿ ಪರಿಷೆಗೆ ಬರುತ್ತಿದ್ದು, ಅವರು ಅವರ ಮನೆಯಲ್ಲಿ ಬಹಳ ಹಿಂದಿನಿಂದಲೂ ಬೆಳೆಯುತ್ತಿರುವ 'ಸಣ್ಣಕಾಯಿ' ಎಂಬ ನಾಟೀ ಕಡಲೇಕಾಯಿಯನ್ನು ಪರಿಷೆಗೆ ತಂದಿದ್ದರು.

ಈ ಕಡಲೇಕಾಯಿಯು ಗಾತ್ರದಲ್ಲಿ ಸಣ್ಣದಾಗಿದ್ದರೂ, ಹೆಚ್ಚು ರುಚಿ ಮತ್ತು ತೈಲಾಂಶವನ್ನುಹೊಂದಿರುತ್ತದೆ ಹಾಗೂ ಒಂದು ಎಕರೆಗೆ 10-12 ಕ್ವಿಂಟಾಲ್ ಇಳುವರಿ ನೀಡುತ್ತದೆ ಎಂಬುದು ಕೆಂಪಯ್ಯನವರ ಅನುಭವ.

ಕಡಲೇಕಾಯಿ ಒಂದು ಪೋಷಕಾಂಶಯುಕ್ತವಾದ ರುಚಿಕರ ಆಹಾರವಾಗಿದ್ದು, ಇದನ್ನು ಖಾದ್ಯ ತೈಲ ಉತ್ಪಾದನೆಗೆ ಹೆಚ್ಚು ಬಳಸಲಾಗುತ್ತದೆ. ಹಸಿ ಕಡಲೇಕಾಯಿ, ಹುರಿದ ಕಡಲೇಕಾಯಿ, ಬೇಯಿಸಿದ ಕಡಲೇಕಾಯಿಯನ್ನು ಆಹಾರವಾಗಿ ಬಳಸಲಾಗುತ್ತದೆ. ಕಡಲೇಕಾಯಿ ರೈತರ ದೃಷ್ಟಿಕೋನದಲ್ಲಿ ತೈಲ ಬೆಳೆಯಾಗಿದ್ದರೆ, ಗ್ರಾಹಕರ ದೃಷ್ಟಿಯಲ್ಲಿ ಬಡವರ ಬಾದಾಮಿಯಾಗಿದೆ.

ಗ್ರಾಹಕರಿಗೆ ಸುವರ್ಣಾವಕಾಶ: ಬಸವನಗುಡಿಯ ಕಡಲೇಕಾಯಿಯ ಪರಿಷೆಯಲ್ಲಿ ಎಲ್ಲಾ ಜಾತಿಯ ಕಡಲೇಕಾಯಿಗಳು ದೊರೆಯುವುದರಿಂದ, ಬೆಂಗಳೂರಿನ ಗ್ರಾಹಕರಷ್ಟೇ ಅಲ್ಲದೆ, ವಿವಿಧ ಪ್ರದೇಶಗಳಿಂದ ಸಹ ಜನರು ಕಡಲೇಕಾಯಿ ಕೊಳ್ಳಲು ಬರುತ್ತಾರೆ. ಪೂನಾದ ರವಿಕಾಂತರವರು, 5 ವರ್ಷಗಳಿಂದ ಈ ಪರಿಷೆಗೆ ಬರುತ್ತಿದ್ದಾರೆ. ಎಲ್ಲಾ ತರಹದ ಕಡಲೇಕಾಯಿಗಳನ್ನು (ವಿವಿಧ ತಳಿಗಳ ಕಾಯಿಯನ್ನು) ತಿಂದು, ಪರೀಕ್ಷಿಸಿ ಯಾವುದು ತುಂಬಾ ಸಿಹಿಯಾಗಿ ಇರುತ್ತದೋ ಅಂತಹುವನ್ನು ಕೊಂಡುಕೊಳ್ಳುವುದು ಇವರ ಪರಿ. ಇವರ ಪ್ರಕಾರ ಮಾಗಡಿಯ ನಾಟೀ ಕಡಲೇಕಾಯಿ ಮತ್ತು ಚಳ್ಳಕೆರೆಯ ಸಣ್ಣಕಾಯಿ ತುಂಬಾ ರುಚಿಕರವಾಗಿರುತ್ತದೆ.

ಮೂಲತ: ಮಂಗಳೂರಿನವರಾಗಿದ್ದು, ಬೆಂಗಳೂರಿನಲ್ಲಿ ವಾಸ ಮಾಡುತ್ತಿರುವ ಮಹದೇವಮ್ಮನವರ ಪ್ರಕಾರ ಬಸವನಗುಡಿಯ ಕಡಲೇಕಾಯಿ ಪರಿಷೆ, ಕಡಲೇಕಾಯಿಕೊಳ್ಳುವವರಿಗೆ ಮತ್ತು ಬೇರೆ ಬೇರೆ ಜಾತಿಯ ಕಡಲಕಾಯಿ ನೋಡ ಬಯಸುವವರಿಗೆ ಒಂದು ಸುವರ್ಣಾವಕಾಶ. ಇವರು 15 ವರ್ಷಗಳಿಂದ ಪ್ರತಿ ವರ್ಷವೂ ತಪ್ಪದೇ ಈ ಜಾತ್ರೆಗೆ ಬರುತ್ತಿದ್ದಾರೆ ಮತ್ತು ಎಲ್ಲಾ ತರಹದ ಕಡಲೇಕಾಯಿಯನ್ನು ಇವರು ಸಾಧ್ಯವಾದಷ್ಟು ಪ್ರಮಾಣದಲ್ಲಿ (1-3 ಕೆ.ಜಿ.) ಕೊಂಡುಕೊಳ್ಳುತ್ತಾರೆ.

ಕನಕಪುರದ ಶ್ರೀದೇವಿ ಮತ್ತು ಬಸಪ್ಪನವರು, ಸ್ವತ: ತಾವೇ ಕಡಲೇಕಾಯಿ ಬೆಳೆವ ರೈತರಾಗಿದ್ದರೂ, ತಾವು ಬೆಳೆದ ಕಡಲೇಕಾಯಿಯನ್ನು ಬಸವನಿಗೆ ಎಡೆ ಕೊಟ್ಟು, ಸ್ವಲ್ಪ ಪ್ರಮಾಣದಲ್ಲಿ ಮಾರಾಟ ಮಾಡಿ, ಇತರೆ ರೈತರು ಮಾರಲು ತಂದ ಕಡಲೇಕಾಯಿಯನ್ನು ಕೊಂಡುಕೊಳ್ಳುತ್ತಾರೆ. ಇವರ ಪ್ರಕಾರ ಕಡಲೇಕಾಯಿಯನ್ನು ಪ್ರತಿದಿನ ಸ್ವಲ್ಪ ತಿನ್ನುವುದರಿಂದ ದೇಹಕ್ಕೆ ಜಿಡ್ಡಿನ ಅಂಶ ಮತ್ತು ಪ್ರೊಟೀನ್ ದೊರೆಯುತ್ತದೆ. ಇವರ ಮನೆಯಲ್ಲಿ ಪ್ರತಿ ದಿನ ಸಂಜೆ ಕಡಲೇಕಾಯಿ ತಿನ್ನುವ ವಾಡಿಕೆ ಇದೆಯಂತೆ.

ಮಂಡ್ಯದ ಸರಸ್ವತಮ್ಮನವರು, 8 ವರ್ಷಗಳಿಂದ, ತಮ್ಮ ಅಕ್ಕಪಕ್ಕದ ಮನೆಯ ಮಹಿಳೆಯರನ್ನು (1-7 ಜನ) ಒಟ್ಟುಗೂಡಿಸಿಕೊಂಡು, ಕಡಲೇಕಾಯಿ ಪರಿಷೆಗೆ ಬರುತ್ತಿದ್ದಾರೆ. ಇವರ ಪ್ರಕಾರ ಮಂಡ್ಯದ ಕಡೆ ಬೆಳೆಯುವ ಮೂರು ಕಾಯಿ ಕಡಲೇಕಾಯಿಗಿಂತ, ಸಿರಾ ಮತ್ತು ಚಳ್ಳಕೆರೆ ಪ್ರದೇಶದಲ್ಲಿ ಬೆಳೆಯುವ ಸಣ್ಣ ಕಡಲೇಕಾಯಿ ತುಂಬಾ ರುಚಿಕರವಾಗಿರುತ್ತದೆಯಂತೆ. ಅವರು ಈ ಪರಿಷೆಗೆ 6-7 ಜನ ಮಹಿಳೆಯರ ಗುಂಪು ಸೇರಿಸಿಕೊಂಡು ಒಟ್ಟಿಗೆ ಸಿರಾ, ಚಳ್ಳಕೆರೆ ಮತ್ತು ಚಿತ್ರದುರ್ಗದ ಕಡೆಯ ಸಣ್ಣ ಕಡಲೇಕಾಯಿಯನ್ನು ಕೊಂಡುಕೊಳ್ಳಲೆಂದೇ ಬರುತ್ತಾರೆ.

ಸಾಂಪ್ರಾದಾಯಿಕ ಹಿನ್ನಲೆ: ದಾರಿಯುದ್ದಕ್ಕೂ, ಕಣ್ಣಿನ ದೃಷ್ಟಿಹರಿಯುವವರೆಗೂ ರಾಶಿ ರಾಶಿಯಾಗಿ ಕಂಗೊಳಿಸುವ ಕಡಲೇಕಾಯಿ ಪರಿಷೆಯಲ್ಲಿ ಅಲ್ಲಲ್ಲಿ ಬಿಡಾರಗಳನ್ನು ಹಾಕಿಕೊಂಡು ಉಚಿತವಾಗಿ ಮಜ್ಜಿಗೆ, ಪಾನಕ ಹಂಚುವವರು ದಂಡು ದಂಡಾಗಿದ್ದರು. ಕಾರ್ತಿಕ ಸೋಮವಾರದಂದು ಬಸವನಿಗೆ ಪೂಜೆ ಸಲ್ಲಿಸಿ ಮಾರನೆಯ ದಿನದ ಉತ್ಥಾನ ದ್ವಾದಶಿಯಂದು, ಪಾನಕ, ಮಜ್ಜಿಗೆಯನ್ನು ಹಂಚುವುದು ಸಹ ಕೆಲವು ಮನೆತನಗಳಲ್ಲಿ ಬಹಳ ಹಿಂದಿನಿಂದ 50-60 ವರ್ಷಗಳಿಂದ ನಡೆದು ಬಂದಿರುವ ಪದ್ಧತಿಯಾಗಿದೆ.

ಬೆಂಗಳೂರಿನ ನಿವಾಸಿಗಳಾದ ಗೋವಿಂದಪ್ಪನವರು, ನೆಲಮಂಗಲದ ರಾಜಪ್ಪನವರು ಹೀಗೆ ಅನೇಕ ಜನರು ಉಚಿತವಾಗಿ ಪಾನಕ ಹಂಚುತ್ತಿದ್ದರು. ಹೀಗೆ ಉತ್ಥಾನ ದ್ವಾದಶಿಯಂದು ಬಸವನನ್ನು ಪೂಜಿಸಿ, ಪಾನಕ ಹಂಚುವುದು ಅವರ ಪೂರ್ವಜರು ನಡೆಸುತ್ತಿದ್ದ ಪದ್ಧತಿ. ಇದರಿಂದ ಅವರಿಗೆ ಆಯುರಾರೋಗ್ಯ, ಐಶ್ವರ್ಯ ಸಿದ್ದಿಸುತ್ತವೆ ಮತ್ತು ಬಸವ ಸಂತೃಪ್ತನಾಗಿ ಕಾಲಕಾಲಕ್ಕೆ ಮಳೆ ಬೆಳೆಯನ್ನು ಕರುಣಿಸುತ್ತಾನೆ ಎಂಬುದು ರಾಜಪ್ಪನವರ ನಂಬಿಕೆ.

ಸಮೃದ್ಧಿಯ ಸಂಕೇತ ರಾಶಿಪೂಜೆ

ಕಣಜ ತುಂಬುವಷ್ಟು ಧಾನ್ಯ ಕೊಟ್ಟ ಮಣ್ಣು, ನೀರು, ಗಾಳಿ, ಪಶು ಪಕ್ಷಿ ಮೊದಲಾದ ಜೀವ ಸಂಕುಲದ ಸಕಲೆಂಟು ಘಟಕಗಳಿಗೂ ಗೌರವದಿಂದ ನಮಿಸುವ ವಿಶಿಷ್ಟ ಆಚರಣೆಯೇ ರಾಶಿ ಪೂಜೆ. ರಾಗಿ ಒಕ್ಕಣೆಯ ನಂತರ ಕಣ ಸಾರಿಸಿ ರಂಗೋಲಿ ಇಟ್ಟು ಧಾನ್ಯವನ್ನು ರಾಶಿ ಹಾಕುತ್ತಾರೆ. ಒಕ್ಕಣೆಗೆ ಬಳಸಿದ ಮೊರ, ಮರೆಗೋಲು, ಉದ್ದಿಗೆ, ಗುಂಡು, ಕುಡುಗೋಲುಗಳನ್ನೆಲ್ಲಾ ರಾಶಿ ಜೊತೆ ಇಟ್ಟು ಹೂಕಾಯಿ ಎಲೆಗಳಿಂದ ಶೃಂಗರಿಸಿದ ರಾಶಿಯನ್ನು ಪೂಜಿಸುತ್ತಾರೆ. ಇಲ್ಲಿ ಮೊರ ನೀರಿನ ಸಂಕೇತವಾದರೆ ಮರಗಿಡ ಎಲೆಗಳು ಕೀಟಗಳನ್ನು ಪ್ರತಿನಿಧಿಸುತ್ತವೆ. ನೆಲದ ಸಾರವನ್ನು ಪಿಳ್ಳೆರಾಯನ ಮೂಲಕ ಕಳೆಯನ್ನು ಗರಿಕೆಯ ಮೂಲಕ ವೈಭವೀಕರಿಸಲಾಗುತ್ತದೆ. "*ಕಾಡಿಕ್ಕಿ ಕುಣಿದಾಡಿದ ಕಣವೇ ಓಲಗ ಉದ್ದಿಗೆ ಎದ್ದಾಡಿದ ಕಣವೇ ಓಲಗ ರಾಗಳ್ಳಿ ಬೆಟ್ಟ ಬೆಳ್ದಂಗೆ ಬೆಳೆಯೋ ಓಲಗ*" ಎಂದು ಈ ಸಂದರ್ಭದಲ್ಲಿ ಹೇಳುವ ಜನಪದ ಗೀತೆ ಅರ್ಥ ಪೂರ್ಣವಾದುದು.

ಕೃಪೆ: ಗ್ರಾಮ ಮಿತ್ರ - 2002,
ಹಳ್ಳಿಗರ ಕ್ಯಾಲೆಂಡರ್, ಗ್ರೀನ್ ಪ್ರತಿಷ್ಠಾನ

ಅಡಿಕೆ ಮರ ಏರಲು ಸುಲಭ - ಸರಳ ಅಲ್ಯೂಮಿನಿಯಂ ಏಣಿ

ಇದು ಯಂತ್ರಯುಗ. ವೇಗದ ಚಾಲನೆಗೆ ಈಗ ಪ್ರಾಶಸ್ತ್ಯ ಕೃಷಿಯಲ್ಲಿ ತಾಂತ್ರಿಕತೆಯು ಇತ್ತೀಚಿಗಿನ ಬೆಳವಣಿಗೆ.

ಅಡಿಕೆ, ತೆಂಗು ಕೃಷಿಯಲ್ಲಿ ಕೊಯ್ಲಿನ, ಮದ್ದುಸಿಂಪಡಿಸುವ ಸಮಸ್ಯೆಗಳು ಗಾಢವಾದುದು. ಆಳುಗಳು ಸಿಗುತ್ತಿಲ್ಲ, ಸಿಕ್ಕಿದರೂ ನಿರೀಕ್ಷಿಸಿದ ಕೆಲಸ ಆಗುತ್ತಿಲ್ಲ. ಅಲ್ಲಲ್ಲಿ ಯಾಂತ್ರಿಕ ಆವಿಷ್ಕಾರಗಳು ಆಗುತ್ತಿದ್ದರೂ ಕೃಷಿಕರನ್ನು ಮುಟ್ಟುತ್ತಿಲ್ಲ. ಈ ಹಿನ್ನೆಲೆಯಲ್ಲಿ ಪುತ್ತೂರಿನ ಶ್ರೀ ಎ. ಕೇಶವ, ಶ್ರೀ ಸದಾಶಿವ ಭಟ್, ಶ್ರೀ ರವೀಶ್ ಎಸ್.ಆರ್.ಕೆ. ಫೇಬ್ರಿಕೇಟರ್ಸ್ ಒಟ್ಟಾರೆ ಸೇರಿ ನಿರ್ಮಿಸಿದ ಹಗುರ ಅಲ್ಯೂಮಿನಿಯಂ ಏಣಿ ಬಹೂಪಯೋಗಿ. ಈ ಏಣಿಯ ಮುಖಾಂತರ ತೆಂಗು, ಅಡಿಕೆ ಮರಗಳನ್ನು ಏರಿ ಮದ್ದು ಸಿಂಪಡಿಸಬಹುದು. ಕೊಯ್ಲು ಮಾಡಬಹುದು. ಕಾಳು ಮೆಣಸು ಕೊಯ್ಯಲು ಬಹು ಉತ್ತಮ. ತೋಟದ ಮಧ್ಯೆ ಮರದಿಂದ ಮರಕ್ಕೆ ಸುಲಭ ರವಾನೆ, ಬೇಕಾದಷ್ಟು ಗಿಡ್ಡ ಯಾ ಉದ್ದ ಮಾಡುವ ವ್ಯವಸ್ಥೆ, ಅತಿ ಹಗುರ, ತುಕ್ಕು ಹಿಡಿಯದಿರುವುದು - ಏಣಿಯ ವೈಶಿಷ್ಟ್ಯ.



ಮರಕ್ಕೆ ಏಣಿಯನ್ನು ಒರಗಿಸಿ ಒಂದೆರಡು ಕಡೆ ಹಗ್ಗದಿಂದ ಕಟ್ಟಿದರೆ ಏಣಿ ಬೀಳಬಹುದೆಂಬ ಭಯವಿಲ್ಲ. ಮಕ್ಕಳು, ಮಹಿಳೆಯರು ಕೂಡಾ ನಿರ್ಭೀತಿಯಿಂದ ಮರ ಏರಿ ಅಡಿಕೆ, ತೆಂಗನ್ನು ಕೊಯ್ಯಬಹುದು!

ಚಿತ್ರದಲ್ಲಿ ತೋರಿಸಿರುವಂತೆ ಮೂರು ಇಂಚಿನ ಅಲ್ಯೂಮಿನಿಯಂ ಸ್ಪ್ರಿಂಕ್ಲರ್ ಪೈಪನ್ನು ಸಮಾನಾಂತರದಲ್ಲಿ ರಂಧ್ರ ಮಾಡಿ, ಒಂದು ಇಂಚಿನ ಫ್ಲ್ಯೂಟೆಡ್ ಅಲ್ಯೂಮಿನಿಯಂ ಪೈಪನ್ನು ಪಾದ ನಿಲ್ಲುವಷ್ಟು ಅಡ್ಡವಾಗಿ ತೂರಿಸಿದರೆ ಏಣಿ ಸಿದ್ಧ. ಪಾದ ಜಾರದಂತೆ ಒಳಬದಿಗೆ ಚಾರೆಯಿದೆ. ಏಣಿಯ ಬುಡಭಾಗದಲ್ಲಿ ಮುಳ್ಳಿನಂತಹ ವ್ಯವಸ್ಥೆಯಿದೆ.

ನಮ್ಮ ಅನುಕೂಲತೆಗೆ ತಕ್ಕಂತೆ 20, 30, 40 ಅಡಿಗಳ ಏಣಿಗಳನ್ನು ನಿರ್ಮಿಸಬಹುದಾಗಿದೆ. ಈಗಾಗಲೇ ಹಲವಾರು ಮಂದಿ ಕೃಷಿಕರು ಇದರ ಸದುಪಯೋಗ ಪಡೆದಿದ್ದಾರೆ. ಬಹಳಷ್ಟು ಬೇಡಿಕೆಗಳು ಬರುತ್ತಿವೆ.

ಕರ್ನಾಟಕದ ಅಡಿಕೆ ಬೆಳೆಯುವ ಪ್ರದೇಶದ ಎಲ್ಲಾ ತೋಟಗಳಿಗೂ ಈ ಏಣಿ ಹೊಂದಿಕೊಳ್ಳಬಹುದಾಗಿದೆ. ಈಗಾಗಲೇ ಹಲವು ಜಿಲ್ಲೆಗಳಲ್ಲಿ ಎಸ್.ಆರ್.ಕೆ. ಮಿತ್ರರು ಓಡಾಡಿದ್ದಾರೆ. ಕೃಷಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಉತ್ಪನ್ನಗಳನ್ನು ಪ್ರಾತ್ಯಕ್ಷಿಕೆ ಮೂಲಕ ತೋರಿಸುತ್ತಿದ್ದಾರೆ. ಹೀಗಾಗಿ ಬೇಡಿಕೆಗಳಿಗೆ ತೊಂದರೆಯಿಲ್ಲ.

ಹೆಚ್ಚಿನ ಕೃಷಿಕರಿಗೆ ತಾಂತ್ರಿಕ ಅಂಶಗಳು ಸ್ಪಷ್ಟವಾಗುವುದಿಲ್ಲ. ಹಾಗಾಗಿ ಕೆಲವೆಡೆ ಏಣಿಯ ಬಗ್ಗೆ ವಿವರಿಸುವುದೇ ತ್ರಾಸವಾಗಿದೆ. ಏಣಿಯ ಮಹತ್ವ, ವಿನ್ಯಾಸವನ್ನು ಒಪ್ಪಿದ ಕೃಷಿಕರು ಏಣಿಯನ್ನು ಪ್ರೋತ್ಸಾಹಿಸುತ್ತಿದ್ದಾರೆ ಎನ್ನುತ್ತಾರೆ ಕೇಶವ.

ಕೈಗೆಟುವ ಬೆಲೆ, ಹಗುರ ಕೆಲಸಕ್ಕೆ ಜನ ಸಿಗದಿದ್ದರೆ ಸ್ವತ: ನಾವೇ ಮರ ಹತ್ತಿ ತೋಟದ ಕೆಲಸ ನಿಭಾಹಿಸಬಹುದು. ಸಣ್ಣಪುಟ್ಟ ಕೆಲಸಕ್ಕೆ ಆಳುಗಳನ್ನು ಕಾಯುವ ಪ್ರಮೇಯ ತಪ್ಪುತ್ತದೆ ಎಂಬುದು ಏಣಿಯನ್ನು ಉಪಯೋಗಿಸಿದ ಹಲವು ಕೃಷಿಕರ ಅಭಿಪ್ರಾಯ.

ವಿ.ಸೂ: ಈ ಅನುಶೋಧನೆಯನ್ನು NIF ನ ದ್ವಿತೀಯ ಸ್ಪರ್ಧೆಗೆ ಕಳುಹಿಸಲಾಗಿದೆ.

ಗೋಕಾಕದ ಕರದಂಟು - ಗಟ್ಟಿಯಾಗುತ್ತಿರುವ 'ಹಿತ್ತಲಗಿಡ'

ಗೋಕಾಕ ಎಂದೊಡನೆ ಒಟ್ಟಾಗಿ ಬರುವ ಹೆಸರು, ಕರದಂಟು. ಈಗ ಕರದಂಟು ಖರೀದಸಲು ಗೋಕಾಕಕ್ಕೆ ಹೋಗಬೇಕೆಂದಿಲ್ಲ. ಕರದಂಟು ವರ್ಷಾನು ವರ್ಷಗಳ ಕಾಲದಿಂದಲೂ ಬೇಡಿಕೆಯಲ್ಲಿರುವ ಸ್ಥಳೀಯ ಸಿಹಿ ತಿಂಡಿ. ಇದು ಒಣಹಣ್ಣಿನಿಂದ ಮಾಡಿದ ಪೌಷ್ಟಿಕ ತಿಂಡಿ.ಬೆಲ್ಲದ ಪಾಕ ಮಾಡಿ, ಅದಕ್ಕೆ ಶುದ್ಧ ತುಪ್ಪದಲ್ಲಿ ಕರಿದ ಗೋಡಂಬಿ, ಪಿಸ್ತಾ, ಬಾದಾಮಿ, ಅಂಜೂರ, ಖಾರಿಕ, ಗಸಗಸಿ ಹಾಗೂ ಕ್ಯಾರಬೀಜವನ್ನು ಮಿಶ್ರಣ ಮಾಡಿ ತಯಾರಿಸುತ್ತಾರೆ.

ಗೋಕಾಕದಲ್ಲಿ ಕರದಂಟು ಮಾಡುವ ಅನೇಕ ಅಂಗಡಿಗಳಿವೆ. ಇಂತಹ ಒಂದು ಅಂಗಡಿ ಗೋಕಾಕದ ಬಸ್ ನಿಲ್ದಾಣದ ಬಳಿ ಇರುವ 'ಸದಾನಂದ ಭವನ ಸ್ವೀಟ್ಸ್'. ಕಳೆದ 25 ವರ್ಷಗಳಿಂದ ಕರದಂಟು ತಯಾರಿಕೆಯಲ್ಲಿ ತೊಡಗಿರುವ ಸದಾನಂದ ಭವನದ ಮಾಲಿಕರಾದ ಶಂಕರ ದೇವರಮನಿ ಮತ್ತು ಅವರ ಮಗ ಉದಯದೇವರಮನಿ ಈಗ ಹೊಸ ತಾಂತ್ರಿಕತೆಯೊಂದಿಗೆ ಮಾರಾಟಕ್ಕಿಳಿದಿದ್ದಾರೆ. www. gokakkaradant.comನ್ನು ಸಂದರ್ಶಿಸಿದರೆ, ಹಾಗೂ email: sadanand@gokakkardant.com ಗೆ ಬರೆದು ನೀವಿದ್ದಲ್ಲಿಗೇ ಕರದಂಟು ತರಿಸಿಕೊಳ್ಳಬಹುದು. ಆಧುನಿಕ ತಂತ್ರಜ್ಞಾನ ಬಳಸಿ ಇವರು ಮಾಡುವ ಕರದಂಟು ಕನಿಷ್ಠ 3ರಿಂದ 4 ತಿಂಗಳವರೆಗೆ ಸಂಗ್ರಹಿಸಿ ಇಟ್ಟು ಉಪಯೋಗಿಸಿದರೂ ಕೆಡುವುದಿಲ್ಲವಂತೆ.

ಮೂಲ ಲೇಖನ: ಗೋವಿಂದ ಮಡಿವಾಳರ
ಕೃಪೆ : ಪ್ರಜಾವಾಣಿ, 12/3/2001

ಸಸ್ಯಸಿರಿ

ಆರ್ಯುವೇದದ ಮಹತ್ವದ ಕಡೆ ಇತ್ತೀಚೆಗೆ ಬಹುತೇಕ ಮಂದಿಯ ಗಮನ ಹರಿಸುತ್ತಿರುವ ಅನೇಕ ರೋಗಗಳಿಗೂ ಚಿಕಿತ್ಸೆ ನೀಡಬಲ್ಲ ಆಯುರ್ವೇದದ ಮಹತ್ವವನ್ನು ಇಂದು ಲೋಕ ಸರ್ವ ಸಮ್ಮತದಿಂದ ಒಪ್ಪಿಕೊಂಡಿದೆ. ಈ ನಿಟ್ಟಿನಲ್ಲಿ ನೈಸರ್ಗಿಕ ಸಂಪನ್ಮೂಲ ಸಂರಕ್ಷಣಾ ಸಂಸ್ಥೆಯು ಹೊರತಂದಿರುವ ಸಸ್ಯ ಸಿರಿ ಎಂಬ 51 ಪುಟಗಳನ್ನೊಳಗೊಂಡ ಈ ಪುಸ್ತಕದಲ್ಲಿ ಪ್ರಾಥಮಿಕ ಆರೋಗ್ಯ ರಕ್ಷಣೆಯಲ್ಲಿ ಉಪಯೋಗಿಸಬಹುದಾದ ಕೆಲವು ಔಷಧೀಯ ಸಸ್ಯಸಗಳ ಕಿರು ಪರಿಚಯವನ್ನು ಛಾಯಾಚಿತ್ರಗಳೊಂದಿಗೆ ಮಾಡಿಕೊಡಲಾಗಿದೆ. ಈ ಪುಸ್ತಕದ ಬೆಲೆ: ರೂ. 38.50

ಪ್ರಕಾಶನ: ಎಸ್.ಶ್ರೀಧರ್, ನೈಸರ್ಗಿಕ ಸಂಪನ್ಮೂಲ ಸಂರಕ್ಷಣಾ ಸಂಸ್ಥೆ
ನಂ.10, ಸಿರೂರು ಪಾರ್ಕ್, ಬಿ ಸ್ಟ್ರೀಟ್, ಶೇಷಾದ್ರಿಪುರಂ, ಬೆಂಗಳೂರು-20

ಜೈವಿಕ ಕೃಷಿ

ವಿಜಯ್ ಅಂಗಡಿ ವಿರಚಿತ, ಸುಲಭದ ಸ್ಥಳೀಯ ಕೃಷಿ ಪದ್ಧತಿಗಳ ಕೈಪಿಡಿಯೇ ಜೈವಿಕ ಕೃಷಿ. ಇದು ಪರಿಸರ ಪ್ರಿಯ ಕೃಷಿ ಮಾಲಿಕೆಯ ಎರಡನೇ ಕಿರು ಹೊತ್ತಿಗೆಯಾಗಿರುತ್ತದೆ. ಈ ಹೊತ್ತಿಗೆಯು ಹಾಸನ ಹಸನಾದ ಜಿಲ್ಲೆ, ಕೃಷಿಯಲ್ಲಿ ಜೀವಿಗಳ ಕಾಯಕ, ಹಿತವಾದ ಚಿಂತನೆಯ ಜೈವಿಕ ಕೃಷಿ, ಜೈವಿಕ ಕೃಷಿಯ ಮೂಲಗಳು ಮತ್ತು ಸರಳ ಪದ್ಧತಿಗಳನ್ನು ಒಳಗೊಂಡಿದೆ. ಈ ಪುಸ್ತಕದ ಬೆಲೆ: ರೂ.5/-.

ಪ್ರಕಾಶಕರು: ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್,
ನಂ.2102, 1ಎ, ರಂಗೋಲಿ ಹಳ್ಳ, ಹಾಸನ - 573 201

ಗ್ರಾಮೀಣ ಬದುಕಿನ ಜೀವನಾಡಿ ಕೆರೆಗಳನ್ನು ಮರೆಯಬೇಡಿ

ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾಲಯ ಬೆಂಗಳೂರಿನ ಮಣ್ಣು ಮತ್ತು ರಸಾಯನ ಶಾಸ್ತ್ರ ವಿಭಾಗವು, ಗಜಾನನ ಮತ್ತು ಸಿದ್ದರಾಮಪ್ಪ ಆರ್ ಅವರ ನೇತೃತ್ವದಲ್ಲಿ ಗ್ರಾಮೀಣ ಬದುಕಿನ ಜೀವನಾಡಿ ಕೆರೆಗಳನ್ನು ಮರೆಯಬೇಡಿ ಎಂಬ ಹನ್ನೊಂದು ಪುಟಗಳನ್ನೊಳಗೊಂಡ ಕಿರು ಹೊತ್ತಿಗೆಯನ್ನು ಹೊರ ತಂದಿದೆ. ಈ ಹೊತ್ತಿಗೆಯು ಕರ್ನಾಟಕದಲ್ಲಿ ಇರುವ ವಿವಿಧ ಕೆರೆಗಳ ಬಗ್ಗೆ ಕೆರೆಗಳ ಮಹತ್ವದ ಬಗ್ಗೆ ಮತ್ತು ಕೆರೆಗಳ ಹೂಳಿನ ಸಾರ, ಸತ್ವದ ಹಾಗೂ ಅವರ ಪ್ರಯೋಜನದ ಬಗ್ಗೆ ಉಪಯುಕ್ತ ಮಾಹಿತಿಯನ್ನು ಒಳಗೊಂಡಿದೆ.

ಲೇಖಕರು : ಶ್ರೀ ಗಜಾನನ ಮತ್ತು ಶ್ರೀ ಆರ್. ಸಿದ್ದರಾಮಪ್ಪ
ಪ್ರಕಾಶಕರು : ಮಣ್ಣು ಮತ್ತು ರಸಾಯನ ಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ
ಬೆಂಗಳೂರು - 560 065

ಸಾಂಪ್ರದಾಯಕ ಕೃಷಿ ಪದ್ಧತಿಯ ಮೌಲ್ಯಗಳು

ಸಾಂಪ್ರದಾಯಿಕ ಕೃಷಿ ಪದ್ಧತಿಗಳ ಮಹತ್ವವನ್ನು ವಿವಿಧ ಜನಪದ ಮತ್ತು ಕೃಷಿ ಗಾದೆಗಳ ಸಮರ್ಥನೆಯೊಂದಿಗೆ ಈ ಪುಸ್ತಕ ತಿಳಿಸುತ್ತದೆ. ಮಿಶ್ರಬೆಳೆ, ಸಾವಯವ ಗೊಬ್ಬರ, ಕೆರೆ ಮತ್ತು ಕೆರೆ ನೀರಿನ ಬಳಕೆ, ಮಾಗಿ ಉಳುಮೆ, ಆಳವಾದ ಉಳುಮೆ, ಸುಡು ಮಣ್ಣು ಆಳವಾದ ಉಳುಮೆ ಮುಂತಾದ ಅನೇಕ ಸಾಂಪ್ರದಾಯಿಕ ಕೃಷಿ ಪದ್ಧತಿಗಳ ಬಗ್ಗೆ ವಿವರಣೆ ನೀಡುವ ಈ ಪುಸ್ತಕವು ಸಾವಯವ ಕೃಷಿಕರಿಗೆ ಮತ್ತು ಸಾವಯವ ಕೃಷಿ ಅನುಸರಿಸಬಯಸುವವರಿಗೆ ಒಂದು ಒಳ್ಳೆ ಮಾರ್ಗದರ್ಶನವಾಗುತ್ತದೆ.

ಲೇಖಕರು: ಜಿ.ಎನ್.ಗಜಾನನ, ಪ್ರಭುಗೌಡಪಾಟೀಲ್ ಮತ್ತು ಎಂ.ಎ.ಶಂಕರ್
ಪ್ರಕಾಶಕರು: ಅಖಿಲ ಭಾರತ ಖುಷ್ಕಿ ಬೇಸಾಯ ಸಂಶೋಧನಾ ಪ್ರಾಯೋಜನೆ
ಕೃಷಿ ವಿಶ್ವವಿದ್ಯಾನಿಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು - 65

ವಿಶೇಷ ಸೂಚನೆ

ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ವಾಣಿಜ್ಯ ದೃಷ್ಟಿಯಿಂದ ಬಳಸಬಯಸುವವರು ಮೊದಲು ಅದನ್ನು ಹಿತ್ತಲಗಿಡದ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ, ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

- ಸಂಪಾದಕ

ಮನವಿ

ನೀವು ಅನುಸರಿಸುತ್ತಿರುವ ಕೃಷಿ ಪದ್ಧತಿಗಳ ಬಗ್ಗೆ, ಕೀಟ ರೋಗ ನಿಯಂತ್ರಣಕ್ಕೆ ಅನುಸರಿಸುತ್ತಿರುವ ಸಾವಯವ ಪದ್ಧತಿಗಳ ಬಗ್ಗೆ ಮತ್ತು ನಿಮ್ಮ ಹಸು ದನಗಳಲ್ಲಿ ಕೀಟ ರೋಗ ಹತೋಟಿ ಮಾಡುವಲ್ಲಿ ನೀವು ಅನುಸರಿಸುತ್ತಿರು ಕ್ರಮ (ರಾಸಾಯನಿಕಗಳ ಹೊರತು ಪಡಿಸಿ)ಗಳ ಬಗ್ಗೆ ವಿವರಗಳನ್ನು ಹಿತ್ತಲಗಿಡದ ಪ್ರಕಟಣೆಗಾಗಿ ಕಳಿಸಿಕೊಡಬೇಕಾಗಿ ಮನವಿ. ನೀವು ಕಳಿಸುವ ದೇಶೀಯ ಪದ್ಧತಿಗಳನ್ನು ತಳಮಟ್ಟದ ಶೋಧಕರ ಹುಡುಕಾಟದ ಸ್ಪರ್ಧೆಗೂ ಕಳುಹಿಸಲಾಗುವುದು - *ಸಂಪಾದಕರು.*

ಬಸವನಗುಡಿಯ ಕಡಲೇಕಾಯಿ ಪರಿಷೆ

ನವೆಂಬರ್ 26-27, 2001ರ ಉತ್ಥಾನ ದ್ವಾದಶಿಯಂದು ಬೆಂಗಳೂರು ಬಸವನಗುಡಿಯಲ್ಲಿ ಕಡಲೇಕಾಯಿ ಪರಿಷೆ ನಡೆಯಿತು. ಹಿಂದಿನಿಂದ ತನ್ನದೇ ಆದ ವೈಶಿಷ್ಟ್ಯವನ್ನು ಕಾಯ್ದು ಕೊಂಡು ಬಂದಿರುವ ಈ ಪರಿಷೆಯು ಈ ವರ್ಷ ಸಹ ರೈತರನ್ನು, ಮಧ್ಯವರ್ತಿಗಳನ್ನು ಮತ್ತು ಗ್ರಾಹಕರನ್ನು ಆಕರ್ಷಿಸಿ ಒಂದೆಡೆ ಸೇರಿಸಿತ್ತು. ಮಾಗಡಿ, ಕನಕಪುರ, ಚಳ್ಳಕೆರೆ, ಹಿಂದೂಪುರ, ತಮಿಳುನಾಡು ಮುಂತಾದ ಬೇರೆ ಬೇರೆ ಪ್ರದೇಶಗಳಿಂದ ರೈತರು ಪೈಪೋಟಿಯಿಂದ ಕಡಲೇಕಾಯಿ ವ್ಯಾಪಾರ ನಡೆಸಿದರು. ದಾರಿಯುದ್ದಕ್ಕೂ ಕಣ್ಣಿನ ದೃಷ್ಟಿ ಹರಿಯುವಷ್ಟು ದೂರದವರೆಗೆ ಕಡಲೇಕಾಯಿ ರಾಶಿ ರಾಶಿಯಾಗಿ ಕಂಗೊಳಿಸುತ್ತಾ ಕೊಳ್ಳುವವರಿಗೆ, ನೋಡುವವರಿಗೆ ವಿಶೇಷ ಅವಕಾಶ ನೀಡಿತ್ತು.

ಬದಿಯಡ್ಕದ ಕೃಷಿ ಮಹೋತ್ಸವ

ತಾ. 22-12-2001ರಂದು ಬದಿಯಡ್ಕದಲ್ಲಿ ಜರುಗಿದ ಕೃಷಿ ಮಹೋತ್ಸವವು ನೂರಕ್ಕೂ ಹೆಚ್ಚು ಕೃಷಿ ಯಂತ್ರ ತಂತ್ರಗಳನ್ನು ಪರಿಚಯಿಸಿತ್ತು. ರೈತರು ತಮ್ಮದೇ ಆದ ಅನನ್ಯ ಅನುಭವದ ಜ್ಞಾನದಿಂದ ಹೊರ ತಂದ ಮತ್ತು ರೈತರ ದಿನ ನಿತ್ಯದ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ಸೂಚಿಸುವ ಅನೇಕಾನೇಕ ಕೃಷಿ ಯಂತ್ರ, ತಂತ್ರಗಳನ್ನು ಗುರುತಿಸಿ ಹೊರ ತರುವ ಕಾರ್ಯವನ್ನು ಯಂತ್ರ ತಂತ್ರ ಆವಿಷ್ಕಾರದ ಮತ್ತು ಕೃಷಿ ಮಹೋತ್ಸವದ ನೇತಾರರಾದ ಶ್ರೀ ಗಣಪತಿಭಟ್ ರವರು ಸಮರ್ಪಕವಾಗಿ ನೆರವೇರಿಸಿದ್ದರು.

ಬೀಜ ಉತ್ಸವ

ನಾಟೀ ಬೀಜಗಳ ಸಂರಕ್ಷಣೆಯಲ್ಲಿ ಗಂಭೀರ ಕಾರ್ಯ ನಡೆಸುತ್ತಿರುವ ಶ್ರೀಮತಿ ವನಜಾ ರಾಂಪ್ರಸಾದ್ ನೇತೃತ್ವದ ಗ್ರೀನ್ ಪ್ರತಿಷ್ಠಾನ ತನ್ನ ದಶಮಾನೋತ್ಸವ ಆಚರಿಸುತ್ತಿದೆ. ಈ ಹಿನ್ನಲೆಯಲ್ಲಿ ಫೆ.5 ರಂದು ಬೆಂಗಳೂರಿನ ನಿಯಾಸ್ ಸಂಸ್ಥೆಯಲ್ಲಿ ಗ್ರಾಮೀಣ ಬದುಕಿನ ಸುಸ್ಥಿರತೆ ಬಗ್ಗೆ ಒಂದು ವಿಚಾರ ಸಂಕಿರಣವನ್ನೂ ಫೆ.6ರಂದು ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ಬೀಜ ಉತ್ಸವ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿದೆ. ಈ ಬೀಜ ಉತ್ಸವದಲ್ಲಿ ನಾಟೀ ತಳಿಗಳ ಸಂರಕ್ಷಣೆಗಾಗಿ ಸಮುದಾಯ ಬೀಜ ಬ್ಯಾಂಕ್ ಒಕ್ಕೂಟವೊಂದರ ಅಗತ್ಯದ ಬಗ್ಗೆ ಚರ್ಚೆ, ಗ್ರೀನ್ ಪ್ರತಿಷ್ಠಾನದ ಪ್ರಕಟಣೆ, ರೈತರಿಗೆ ಸನ್ಮಾನ ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ರಾಜ್ಯ ಮಟ್ಟದ ಕೃಷಿ ಪತ್ರಿಕೋದ್ಯಮ ಕಾರ್ಯಾಗಾರ

ಡಿಸೆಂಬರ್ 2, 2001ರಂದು ಗದಗದ ಹುಲಕೋಟೆಯ ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ ಸಭಾಂಗಣದಲ್ಲಿ ರಾಜ್ಯ ಮಟ್ಟದ ಕೃಷಿ ಪತ್ರಿಕೋದ್ಯಮ ಕಾರ್ಯಾಗಾರ ನಡೆದಿರುತ್ತದೆ. ಈ ಕಾರ್ಯಗಾರ ಕೃಷಿಕರ ಕೈಗೆ ಲೇಖನಿಯ ಮಹತ್ವ ಮತ್ತು ಸಾವಯವ ಕೃಷಿ ಒಂದು ಚಿಂತನೆ ಎಂಬ ವಿಚಾರಗಳ ನಿಟ್ಟಿನಲ್ಲಿ ಈ ಕಾರ್ಯಾಗಾರವು ಶ್ರೀಕಾತಾಳ ವೀರಪ್ಪನವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀಪಡ್ರೆ, ಡಾ.ಜಿ.ಎನ್.ಎಸ್.ರೆಡ್ಡಿ ಮತ್ತು ಡಾ.ಶಿವರಾಂ ಪೈಲೂರ, ಶ್ರೀ.ಎಚ್.ಕೆ.ಪಾಟೀಲರವರ - ನೇತೃತ್ವದಲ್ಲಿ ನಡೆದಿರುತ್ತದೆ.

ರಾಜ್ಯಮಟ್ಟದ ಕೃಷಿಪತ್ರಿಕೋದ್ಯಮ ಪ್ರಶಸ್ತಿ

ಕನ್ನಡದಲ್ಲಿ ಅರ್ಥಪೂರ್ಣ ಕೃಷಿಪತ್ರಿಕೋದ್ಯಮಕ್ಕೆ ಉತ್ತೇಜನ ನೀಡುವುದಕ್ಕಾಗಿ ಧಾರವಾಡದ ಪರ್ಯಾಯ ಕೃಷಿಮಾಧ್ಯಮ ಕೇಂದ್ರ ಸ್ಥಾಪಿಸಿರುವ ಮೊತ್ತಮೊದಲ ರಾಜ್ಯಮಟ್ಟದ ಉತ್ತಮ ಕೃಷಿ ಬರಹಗಾರ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ. ಎರಡು ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದ್ದು, ಕಾಸರಗೋಡು ಜಿಲ್ಲೆಯ ಚಂದ್ರಶೇಖರ್ ಏತಡ್ಕ ಹಾಗೂ ಹಾವೇರಿ ಜಿಲ್ಲೆ ಹೊಸರಿತ್ತಿಯ ಆರ್.ಎಸ್. ಪಾಟೀಲ್, ಕ್ರಮವಾಗಿ ಕೃಷಿಕರ ಹಾಗೂ ಮುಕ್ತ ವಿಭಾಗಗಳಲ್ಲಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿ ತಲಾ ಎರಡು ಸಾವಿರ ರೂಪಾಯಿ ನಗದು ಪುರಸ್ಕಾರ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

ಸುಸ್ಥಿರ ಕೃಷಿ ತರಬೇತಿ ಕಾರ್ಯಾಗಾರ

ಫೆ.11ರಿಂದ ಮಾರ್ಚ್ 2ರವರೆಗೆ ಡಾ.ರೋಹಿಣಿರೆಡ್ಡಿ ನೇತೃತ್ವದ ಸರಾ (SARRA- South Asian Rural Reconstruction Association) ಸಂಸ್ಥೆ ದಕ್ಷಿಣಾ ಏಷ್ಯಾ ರಾಷ್ಟ್ರಗಳ ಸ್ವಯಂಸೇವಾ ಸಂಸ್ಥೆಗಳಿಗೆ, ವಿಜ್ಞಾನಿಗಳು, ಆಡಳಿತ ವರ್ಗ ಇತ್ಯಾದಿ ವ್ಯಕ್ತಿಗಳಿಗೆ ಬೆಂಗಳೂರಿನಲ್ಲಿ ಸುಸ್ಥಿರ ಕೃಷಿಯ ವಿವಿಧ ಆಯಾಮಗಳ ಬಗ್ಗೆ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಿರುತ್ತದೆ. ಆಸಕ್ತರು ಡಾ. ರೋಹಿಣಿ ರೆಡ್ಡಿ, ದೂರವಾಣಿ ಸಂಖ್ಯೆ: 5232227)ಯವರನ್ನು ಸಂಪರ್ಕಿಸಬಹುದು.

'ಸೃಷ್ಟಿ' ಸನ್ಮಾನ ಸಮಾರಂಭ ಮತ್ತು ಹನಿಬೀ ಬಳಗದ ಭೇಟಿ

ಫೆ.23ರಂದು ಸಂಜೆ ಅಹಮಾದಾಬಾದಿನಲ್ಲಿ ವಿವಿಧ ರಾಜ್ಯಗಳಿಂದ ಆಯ್ದ ಹಲವು ರೈತ ಅನುಶೋಧಕರು, ಕರಕುಶಲಕರ್ಮಿಗಳು, ಮಹಿಳೆಯರು ಮತ್ತು ಹನಿಬೀ ತತ್ವಗಳನ್ನು ಗಟ್ಟಿಮಾಡಲು ಸಹಕರಿಸಿದ ಪ್ರಾಥಮಿಕ ಶಾಲಾ ಅಧ್ಯಾಪಕರುಗಳನ್ನು ಸೃಷ್ಟಿ ಸನ್ಮಾನ ಸಮಾರಂಭದಲ್ಲಿ ಸತ್ಕರಿಸಲಾಗುವುದು. ಆ ದಿನವಿಡೀ ಹನಿಬೀ ಬಳಗದ ಚಟುವಟಿಕೆಗಳ ಬಗ್ಗೆ ತಳಮಟ್ಟದ ಅನುಶೋಧನೆಗಳನ್ನು ಗಟ್ಟಿಮಾಡುವ ವಿಚಾರಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಗುವುದು.

ಈ ನಿಟ್ಟಿನಲ್ಲಿ ಕರ್ನಾಟಕ ಮತ್ತು ತಮಿಳುನಾಡಿನ ಬಹುಮಾನ ಪಡೆದ ತಳಮಟ್ಟದ ಯಂತ್ರ ಅನುಶೋಧನೆಗಳ ರಚನೆ, ವಿನ್ಯಾಸಗಳನ್ನು ವ್ಯವಸ್ಥಿತಗೊಳಿಸುವ ಕಾರ್ಯಾಗಾರವೊಂದನ್ನು ಫೆಬ್ರವರಿ 16-17ರಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಏರ್ಪಡಿಸಲಾಗಿದೆ. ಈ ಸಂದರ್ಭದಲ್ಲಿ 'ಕರ್ನಾಟಕ ಅನುಶೋಧಕರ ಜಾಲ'ದ ಪ್ರಥಮ ಸಭೆಯನ್ನು ಇಟ್ಟುಕೊಳ್ಳಲಾಗಿದೆ.

ಹಿತ್ತಲಗಿಡದ ಎರಡು ಸಾವಿರದ ಇಸವಿಯವರೆಗಿನ ಎಲ್ಲಾ ಸಂಚಿಕೆಗಳು ಲಭ್ಯವಿರುತ್ತವೆ. ರೂ. 350/- ಪಾವತಿ ಮಾಡಿ ಪಡೆದುಕೊಳ್ಳಬಹುದು. ಆಸಕ್ತರು ಮನಿ ಆರ್ಡ್‌ರ್ ಅಥವಾ ಡಿ.ಡಿ. ಕಳಿಸಿ. ಅಂಚೆ ವೆಚ್ಚ ಉಚಿತ.

ಪ್ರತಿಕ್ರಿಯೆ

ಶ್ರೀ ಪ್ರಕಾಶ್‌ರವರಿಗೆ,

ನಾನು ಹಿತ್ತಲಗಿಡದ ಚಂದಾದಾರನಾಗಿದ್ದು ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ವೈವಿಧ್ಯತೆಯನ್ನು ಆನಂದಿಸಿದ್ದೇನೆ. ನೀವು ರೈತರಿಗೆ ಕೊಡುತ್ತಿರುವ ಹತ್ತು ಹಲವು ಸಲಹೆಗಳು, ಬರಹ ಮುಂತಾದವುಗಳ ಅತ್ಯಗತ್ಯವಾಗಿವೆ. ನಾನು ಕೂಡ ರೈತನಾಗಿದ್ದು, ಸ್ವಯಂ ಸೇವಾ ಭಾವನೆಯನ್ನು ಕೂಡ ಹೊಂದಿದ್ದೇನೆ. ರೈತರ ಆರ್ಥಿಕಾಭಿವೃದ್ಧಿ ಮಾಡುವ ವಿಚಾರದಲ್ಲಿ ಸಾವಯವ ಕೃಷಿ, ನೈಸರ್ಗಿಕ ರೋಗ ಹತೋಟಿ ಮುಂತಾದವುಗಳ ಬಗ್ಗೆ ಸಲಹೆ ಸೂಚನೆಗಳನ್ನು ಕೊಡುತ್ತಿದ್ದೇನೆ. ರೈತರು ಬಯಸುವುದಾದರೆ ಅವರ ತೋಟ ಹೊಲಗದ್ದೆಗಳಿಗೆ ಹೋಗಬಯಸುತ್ತೇನೆ. ಆಸಕ್ತ ರೈತರು ಈ ನನ್ನ ಸೇವೆಯನ್ನು ಬಳಸಿಕೊಳ್ಳಲು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬಹುದು. ಸಮಾಜದ ಯಾವುದೇ ಚಟುವಟಿಕೆಗಳನ್ನು ಅನುಷ್ಠಾನಕ್ಕೆ ತರಲು ಸಿದ್ಧನಿದ್ದೇನೆ. ಅದಕ್ಕೆ ಅಗತ್ಯವಾದ ದಾನಿ ಸಂಸ್ಥೆ, ವ್ಯಕ್ತಿಯನ್ನು ಪರಿಚಯ ಮಾಡಿ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ . ಅಗತ್ಯ ಬಿದ್ದಾಗ ಆಹ್ವಾನಿಸಿದರೆ ನಾನು ಬೆಂಗಳೂರಿಗೆ ಬರುತ್ತೇನೆ. ತಾವು ಈ ವಿಳಾಸಕ್ಕೆ ಮರುತ್ತರ ಕೊಡುತ್ತೀರೆಂದು ನಂಬಿರುತ್ತೇನೆ.

ವಿಶ್ವಮೂರ್ತಿ, ಬೊಮ್ಮಗಟ್ಟ,
ಸಂಡೂರು ತಾ., ಬಳ್ಳಾರಿ ಜಿಲ್ಲೆ - 583128

(ನಿಮ್ಮ ಸಹಕಾರ ಬೇಕೇ ಬೇಕಾಗಿದೆ. ಹಿತ್ತಲಗಿಡಕ್ಕೆ ನೀವು ಬರೆದು ಅದನ್ನು ಗಟ್ಟಿ ಮಾಡಲು ನೆರವು ನೀಡಬಹುದು. ಕರ್ನಾಟಕ ಅನುಶೋಧಕರ ಜಾಲದ ಸಕ್ರಿಯ ಸದಸ್ಯರಾಗಬಹುದು - ಸಂಪಾದಕರು)

ಪ್ರೀತಿಯ ಮಿತ್ರರಿಗೆ,

ನಾನು ದಿ. 26ನೇ ಜೂನ್ 2001ರಂದು ಎಲ್ಲ ದಿನ ಪತ್ರಿಕೆಗಳಲ್ಲಿ ಕೃಷಿ ತಂತ್ರಜ್ಞಾನ ಸಂಶೋಧನೆ ಪ್ರಶಸ್ತಿ ಓದುತ್ತಾ ಹೋದಾಗ ತಮಗೂ ಆ ಪ್ರಶಸ್ತಿ ಸಿಕ್ಕಿದ್ದು ನೋಡಿ ತುಂಬಾ ಸಂತೋಷವಾಯಿತು. ಆ ಆನಂದವನ್ನು ಧಾರವಾಡದಲ್ಲಿರುವ ನನ್ನ ಮಿತ್ರರಿಗೆ ತಿಳಿಸಿ ಹೆಮ್ಮೆ ಪಟ್ಟೆವು. ತಾವು ರೈತ ಸಮೂಹಕ್ಕೆ ಕಾಲ ಕಾಲಾಂತರದಿಂದ ಬಳುವಳಿಯಾಗಿ ಬಂದ ಜ್ಞಾನದ ಮನವರಿಕೆಯನ್ನು 'ಹಿತ್ತಲಗಿಡ' ಚಾತುರ್ಮಾಸಿಕ ಪತ್ರಿಕೆ ಪ್ರಕಟಿಸಿ ಆ ಮೂಲಕ ನೂರಾರು ತಳಮಟ್ಟದ ಅನುಶೋಧಕರನ್ನು ಪರಿಚಯಿಸಿರುವುದಕ್ಕೆ ಸರ್ಕಾರವು ತಮ್ಮನ್ನು ಗುರುತಿಸಿ ಪ್ರಶಸ್ತಿ ನೀಡಿದ್ದಕ್ಕೆ ತುಂಬು ಹೃದಯದ ಹಾರ್ದಿಕ ಶುಭಾಶಯಗಳು. ತಮ್ಮ ಈ ಸೇವೆ ಹಾಗೇ ನಿಮ್ಮ ಹಾಗೂ ನಿಮ್ಮ ಧರ್ಮಪತ್ನಿಯವರ ತಾಳ್ಮೆ ಮೆಚ್ಚುವಂಥದ್ದು. ನಿಮಗೂ ಹಾಗೂ ನಿಮ್ಮ ಕುಟುಂಬದವರಿಗೂ ಹೃತ್ಪೂರ್ವಕ ನಮಸ್ಕಾರಗಳು. ನೀವು ಧಾರವಾಡಕ್ಕೆ ಆಗಾಗ ಬರಬೇಕಾಗಿ ವಿನಂತಿ.

ತಮ್ಮ ನಲುಮೆಯ ಮಿತ್ರ
ಡಾ. ಪಿ.ವಿ. ಕೆಂಚಣ್ಣಗೌಡರ್, ತಳಿವಿಜ್ಞಾನಿ,
ಕೃಷಿ ವಿ.ವಿ., ಧಾರವಾಡ

(ವಂದನೆಗಳು: ಧಾರವಾಡದಲ್ಲಿ ಹಿತ್ತಲಗಿಡ ಗಟ್ಟಿಮಾಡಲು ತಮ್ಮಂತಹ ಸ್ನೇಹಿತರ ನೆರವು ಬೇಕಾಗಿದೆ - ಸಂಪಾದಕರು)

ದೆಹಲಿಯಲ್ಲಿ ಪ್ರಶಸ್ತಿ ಪಡೆದ ಕನ್ನಡಿಗರ ತಂಡ



ಪತ್ರಿಕೆ ನೊಂದಣಿ ಸಂಖ್ಯೆ 66842/96

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/-	ರೂ.400/-
ರೈತರು	ರೂ.60/-	ರೂ.500/-
ಇತರರು	ರೂ.75/-	ರೂ.600/-
ಸಂಸ್ಥೆಗಳು	ರೂ.350/-	ರೂ.2500/-
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ *"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"* ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು.
ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ತೆರೆದ ಅಂಚೆ

ವಿಳಾಸ
ಡಾ.ಟಿ. ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065

ಗೆ, ...
....
....
....

Ph: 080-›637002, 8560267 (R)
email: hittalu@bgl.vsnl.net.in and prakashtnk@yahoo.com

Printed by Sri. S. Sridhar, Published by Smt. K. Meenakshi (Owner). Printed at "Navbharath Enterprises" No.10, Sirur Park `B' Street, ÍSheshadripuram, Bangalore - 560 020 and Published at No.399, 14-B Cross, New Town Yelahanka, Bangalore - 560 064. Edited by Dr. T.N. Prakash Kammaradi